
# ವರ್ಣ ವೈಷಮ್ಯ



ವರ್ಣ ವೈಷಮ್ಯ

JNANA001695

ಕವಿ
ಸಿದ್ದಕಟ್ಟೆ ವಿಶ್ವನಾಥ ಶೆಟ್ಟಿ

ಪ್ರಕಟಣೆ
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ
ಬೆಂಗಳೂರು – ೫೬೦ ೦೦೨

# ವರ್ಣವೈಷಮ್ಯ

ಕವಿ

ಸಿದ್ದಕಟ್ಟೆ ವಿಶ್ವನಾಥ ಶೆಟ್ಟಿ

ಪ್ರಕಟಣೆ

**ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ**

ಕನ್ನಡ ಭವನ, ೨ನೆಯ ಮಹಡಿ, ಚಾಲುಕ್ಯ ವಿಭಾಗ, ಬೆಂಗಳೂರು-೫೬೦ ೦೦೨

ವರ್ಣವೈಷಮ್ಯ : ಪೌರಾಣಿಕ ಯಕ್ಷಗಾನ ಪ್ರಸಂಗ

ಕವಿ : ಸಿದ್ದಕಟ್ಟೆ ವಿಶ್ವನಾಥ ಶೆಟ್ಟಿ

ಪ್ರಕಟಣೆ : ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಕನ್ನಡ ಭವನ,
೨ನೆಯ ಮಹಡಿ, ಚಾಲುಕ್ಯ ವಿಭಾಗ, ಬೆಂಗಳೂರು-೫೬೦ ೦೦೨

ಪ್ರಕಟಣವರ್ಷ : ೨೦೧೭

© ಹಕ್ಕುಗಳು ಕಾಯ್ದಿಡಲ್ಪಟ್ಟಿವೆ.

ಪುಟಗಳು : viii + 52

ಬೆಲೆ : ರೂ. **40/-**

ಅಕ್ಷರಸಂಯೋಜನೆ : 'ಶ್ರೀನವದುರ್ಗಾ ಲೇಸರ್‌ಟೆಕ್', ಉಡುಪಿ.
ಮುದ್ರಣ : ಭಾರತ ಪ್ರೆಸ್, ಕಲ್ಸಂಕ, ಉಡುಪಿ.

# ಮುಮ್ಮಾತು

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಯೋಜನೆಗಳಲ್ಲಿ ಪುಸ್ತಕ ಬಹುಮಾನ ಮತ್ತು ಪುಸ್ತಕದ ಪ್ರಕಟಣೆಗಳು ಮುಖ್ಯವಾದವುಗಳು. ಅತ್ತ ಕರಾವಳಿ ಕರ್ನಾಟಕದ ಜನಪ್ರಿಯವಾದ ಯಕ್ಷಗಾನ(ಪಡುವಲಪಾಯ)ದಲ್ಲಿ ವಿಪುಲವಾದ ಸಾಹಿತ್ಯ ಪ್ರಸಂಗಗಳಿದ್ದರೂ, ಅದೆಷ್ಟೋ ಪ್ರಸಂಗಗಳು ಹಸ್ತಪ್ರತಿಯಲ್ಲಿಯೇ ಉಳಿದಿರುವುದು ಗಮನಾರ್ಹ. ಹೀಗೆ ಅಪ್ರಕಟಿತವಾದ ಯಕ್ಷಗಾನ ಪ್ರಸಂಗಗಳಲ್ಲಿ ರಂಗಭೂಮಿಯಲ್ಲಿ ಪ್ರದರ್ಶನಗೊಂಡು ಜನಪ್ರಿಯವಾದವುಗಳೂ ಇವೆ. ಇಂಥ ಪ್ರಸಂಗಗಳನ್ನು ರಚಿಸಿದವರಲ್ಲಿ ಬಹುಮಂದಿ ನಮ್ಮ ಕಣ್ಮುಂದೆ ಇಲ್ಲ. ಅಂಥವರ ಕೃತಿಗಳನ್ನು ಪ್ರಕಟಿಸುವ ಮೂಲಕ ಅವರೆಲ್ಲ ಕೃತಿಶರೀರಿಗಳಾಗಿ ನಮ್ಮ ಮುಂದೆ ನೆನಪಿನಲ್ಲಿ ಉಳಿಯಬೇಕೆಂಬ ಕಾಳಜಿ ಅಕಾಡೆಮಿಯದ್ದು. ಇದರ ಜತೆಯಲ್ಲೇ ರಂಗದಲ್ಲಿ ಜನಪ್ರಿಯವಾಗಿರುವ ಇತ್ತೀಚಿನ ಕವಿಗಳ ಪ್ರಸಂಗಗಳನ್ನೂ ಪ್ರಕಟಿಸುವ ಹಂಬಲ ನಮ್ಮದು.

ಅತ್ತ ಪಡುವಲಪಾಯದ ಯಕ್ಷಗಾನದಂತೆ ಇತ್ತ ಮೂಡಲಪಾಯದ ಬಯಲಾಟಪ್ರಕಾರಗಳ(ದೊಡ್ಡಾಟ, ಸಣ್ಣಾಟ, ಕೃಷ್ಣಪಾರಿಜಾತ, ಸೂತ್ರದ ಗೊಂಬೆಯಾಟ ಇತ್ಯಾದಿ) ಪ್ರಸಂಗಗಳಲ್ಲಿ ಅನೇಕ ಹಸ್ತಪ್ರತಿಯಲ್ಲೇ ಉಳಿದಿರುವುದು ಚಿಂತನೀಯ. ಇಂತಹ ಪ್ರಸಂಗಗಳಲ್ಲಿ ಕೆಲವನ್ನಾದರೂ ವಿದ್ವಾಂಸರಿಂದ ಪರಿಶೀಲಿಸಿ ಪ್ರಕಟಿಸುವ ಯೋಜನೆ ಕಾರ್ಯಗತವಾಗುತ್ತಿರುವುದು ನನಗೆ ಸಂತೋಷವನ್ನು ತಂದಿದೆ.

ಯಕ್ಷಗಾನದ ಉಭಯ ತಿಟ್ಟುಗಳ (ತೆಂಕು-ಬಡಗು) ಖ್ಯಾತ ಕಲಾವಿದರಾದ ಸಿದ್ದಕಟ್ಟೆ ವಿಶ್ವನಾಥ ಶೆಟ್ಟಿಯವರ 'ವರ್ಣವೈಷಮ್ಯ'ವು ರಂಗದಲ್ಲಿ ಜನಪ್ರಿಯವಾದ ಪ್ರಸಂಗವಾಗಿದ್ದು ಇದೀಗ ಪ್ರಕಟವಾಗುತ್ತಿದೆ. ಆದರೆ ಇದನ್ನು ಕಾಣುವ ಯೋಗ ಸಿದ್ದಕಟ್ಟೆಯವರಿಗೆ ಇಲ್ಲವಾದುದು ವಿಧಿಯ ವೈಚಿತ್ರ್ಯ. ಹೀಗಾಗಿ ಈ ಕೃತಿ ಅವರ ಸಂಸ್ಮರಣೆಗೆ ಅಕಾಡೆಮಿಯ ಕಾಣಿಕೆಯಾಗಿ ಕಲಾಭಿಜ್ಞರ ಮುಂದಿದೆ.

ಅಕಾಡೆಮಿಯ ಸದಸ್ಯರಾದ ಮಾನ್ಯ ಅಂಬಾತನಯ ಮುದ್ರಾಡಿಯವರು ಯಕ್ಷಗಾನದ ಕವಿಗಳು, ಅರ್ಥಧಾರಿಗಳು, ಹಿರಿಯ ಸಾಹಿತಿಗಳು, ವಿದ್ವಾಂಸರು. ಅವರು ಈ ಕೃತಿಯನ್ನು ಪರಿಶೀಲಿಸಿರುವುದು ಅತ್ಯಂತ ಸಂತೋಷ. ಅಂಬಾತನಯ ರಿಗೆ ಕೃತಜ್ಞೆ ಸಲ್ಲಿಸುತ್ತೇನೆ. ಕೃತಿಯ ಬಗೆಗೆ ಹೇಳಬೇಕಾದ್ದನ್ನು ಅವರೇ ಹೇಳಿದ್ದಾರೆ.

ನಮ್ಮ ಅಕಾಡೆಮಿಯ ಮುಂದೆ ಮಾಡಲೇಬೇಕಾದ ಬಹಳಷ್ಟು ಕೆಲಸಗಳಿವೆ. ಯಥಾಸಾಧ್ಯವಾಗಿ ಕಾಲಕಾಲಕ್ಕೆ ಈ ಕೆಲಸ ಸಾಗುತ್ತ ಬಂದಿದೆ; ಮುಂದೆಯೂ ಸಾಗಲಿದೆ. ಯಕ್ಷಗಾನದ, ಬಯಲಾಟದ ಕ್ಷೇತ್ರ ವಿಸ್ತರಿಸಬೇಕಾಗಿದೆ. ಈ ಮೂಲಕ ಕಲೆ ಉಳಿದು ಬೆಳಗಬೇಕಾಗಿದೆ. ಎಲ್ಲ ಕನ್ನಡಿಗರ ಬೆಂಬಲದಿಂದ ಇದು ಸಾಧ್ಯವಾಗಲೆಂದು ಆಶಿಸುತ್ತೇನೆ.

೧೪ ಮಾರ್ಚ್ ೨೦೧೭

ನಾಡೋಜ ಬೆಳಗಲ್ಲು ವೀರಣ್ಣ
ಅಧ್ಯಕ್ಷ
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ
ಬೆಂಗಳೂರು.

# ಪ್ರಸ್ತಾವನೆ

'ವರ್ಣವೈಷಮ್ಯ' ಸಿದ್ದಕಟ್ಟೆ ವಿಶ್ವನಾಥ ಶೆಟ್ಟಿಯವರಿಂದ ರಚಿಸಲ್ಪಟ್ಟ, ರಂಗಭೂಮಿಯಲ್ಲಿ ಪ್ರದರ್ಶನಗೊಂಡು ಜನಮಾನ್ಯವಾದ ಕೃತಿ. ಸಿದ್ದಕಟ್ಟೆಯವರು ತೆಂಕು-ಬಡಗು ತಿಟ್ಟುಗಳಲ್ಲಿ ಹೆಸರಾಂತ ಕಲಾವಿದರು. ತನ್ನ ಹಿತಮಿತವಾದ ಮಾತಿನಿಂದ, ಅಭಿನಯದಿಂದ ಜನಮನವನ್ನು ಗೆದ್ದವರು. ಇಷ್ಟೇ ಅಲ್ಲ, ಪ್ರಸಂಗಕರ್ತರಾಗಿಯೂ ಕೀರ್ತಿವೆತ್ತವರು. ಸ್ವಯಂ ಕಲಾವಿದರಾಗಿರುವುದರಿಂದ 'ವರ್ಣವೈಷಮ್ಯ'ಕ್ಕೆ ರಂಗ ಕೃತಿಯಾಗಿ ಮಹತ್ತರ ಸ್ಥಾನವಿದೆ.

'ವರ್ಣವೈಷಮ್ಯ' ಹೆಸರೇ ಹೇಳುವಂತೆ ವರ್ಣ-ವರ್ಣಗಳೊಳಗಿನ ವೈಷಮ್ಯವನ್ನು ಎತ್ತಿ ತೋರುವ ಇಂದಿನ ಕಾಲಚಿಂತನೆಯ ಕಲಾಚಿಂತನೆಯಾಗಿ ರೂಪುಗೊಂಡ ಕೃತಿಯಾಗಿದೆ. ಇಲ್ಲಿ ಎರಡು ಕಥೆಗಳು ಕಾಣಿಸಿಕೊಂಡಿವೆ. ವಿಶ್ವರಥ (ಕೌಶಿಕ)ನು ವಸಿಷ್ಠರೊಡನೆ ಹೋರಾಡಿ ಸೋತು ಅವರಿಂದ 'ಧಿಕ್ ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋಬಲಂ ಬಲಮ್' ಎಂಬ ಉದ್ಘೋಷವನ್ನು ಕೇಳಿ, ತಾನು ಬ್ರಹ್ಮರ್ಷಿಯಾಗಲು ತಪಗೊಂಡು ಸಾಧನೆ ಮಾಡಿದ ಕಥೆ. ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲವೆಂಬುದನ್ನು ವಿಶ್ವಮುಖಕ್ಕೆ ತೋರಿಕೊಟ್ಟ ಕಥೆ. ಇನ್ನೊಂದು ಕರ್ಣನ ಕಥೆ. ಕುಂತಿಯಿಂದ ಪರಿತ್ಯಕ್ತನಾದ ವಸುಷೇಣ (ಕರ್ಣ) ಅದಿರಥನ ಮಗನಾಗಿ ಬಳೆಯುತ್ತ ಶಸ್ತ್ರವಿದ್ಯಾಭ್ಯಾಸಕುತೂಹಲಿಯಾಗುತ್ತಾನೆ. ತಂದೆಯಲ್ಲಿ ಪ್ರಸ್ತಾವಿಸಿ ದ್ರೋಣರ ಬಳಿಗೆ ವಿದ್ಯಾಕಾಂಕ್ಷಿಯಾಗಿ ತೆರಳುತ್ತಾನೆ. ದ್ರೋಣಾಚಾರ್ಯರು ಕ್ಷತ್ರಿಯಕುಮಾರರಾದ ಕೌರವ-ಪಾಂಡವರಿಗೆ ಮಾತ್ರ ಕಲಿಸಲು ಬದ್ಧರಾದವರು. ಹೀಗಾಗಿ ಕರ್ಣನನ್ನು ಶಿಷ್ಯನಾಗಿ ಸ್ವೀಕರಿಸಲು ನಿರಾಕರಿಸುತ್ತಾರೆ. ಆದರೆ ಕಲಿಯಬೇಕೆಂಬ ಕರ್ಣನ ಒಳತುಯ್ತ ಕ್ಷಾತ್ರವಾದುದು. ಆತ ಪರಶುರಾಮರಲ್ಲಿಗೆ ಹೋಗುತ್ತಾನೆ. ತನ್ನ ಆಶೆಯನ್ನು ತೋಡಿಕೊಳ್ಳುತ್ತಾನೆ. ಪ್ರೀತಿಯ ಶಿಷ್ಯನಾಗುತ್ತಾನೆ. ಕೊನೆಯಲ್ಲಿ ಗುರುವಿನ ಶಾಪಕ್ಕೂ ಒಳಗಾಗುತ್ತಾನೆ.

ಮೂಲಕಥೆಯಲ್ಲಿ ಕರ್ಣ ಬ್ರಾಹ್ಮಣನೆಂದು ಹೇಳಿ ಪರಶುರಾಮರ ಶಿಷ್ಯನಾಗುತ್ತಾನೆ. ಆದರೆ ಸಿದ್ದಕಟ್ಟೆಯವರು ಕರ್ಣನ ಬಾಯಿಂದ ಸುಳ್ಳು ಹೇಳಿಸುವುದಿಲ್ಲ. ತಾನು ಅನಾಥನಾದ ವಸುಷೇಣನೆಂದು ವಿದ್ಯಾಕಾಂಕ್ಷಿಯಾಗಿ ನಿಮ್ಮಲ್ಲಿಗೆ ಬಂದಿದ್ದೇನೆ; ಅನುಗ್ರಹಿಸಬೇಕೆಂದು ಬೇಡಿಕೊಳ್ಳುತ್ತಾನೆ. ಪರಶುರಾಮರು ಶಿಷ್ಯನಾಗಿ ಸ್ವೀಕರಿಸುತ್ತಾರೆ. ಕರ್ಣ ಗುರುಗಳ ಪ್ರೀತಿಯ ಶಿಷ್ಯನಾಗುತ್ತಾನೆ. ಎಷ್ಟರಮಟ್ಟಿಗೆಂದರೆ ಶಿಷ್ಯನ ತೊಡೆಗೊರಗಿ ಗುರುಗಳು ವಿಶ್ರಾಂತಿಯನ್ನು ಪಡೆಯುವಷ್ಟು. ಇತ್ತ ಇಂದ್ರ ಈತನಿಂದ

ತನ್ನ ಅರ್ಜುನನಿಗೆ ಆಪತ್ತು ಇದೆ ಎಂದು ತಿಳಿದು ಹೆದ್ದುಂಬಿಯಾಗಿ ಕರ್ಣನ ತೊಡೆಯ ರಕ್ತ ಹೀರುತ್ತಾನೆ. ನೆತ್ತರ ಬಿಸಿಗೆ ಎಚ್ಚೆತ್ತ ಪರಶುರಾಮರು 'ನೀನು ಕ್ಷತ್ರಿಯನೇ ಸರಿ. ವಂಚಿಸಿ ವಿದ್ಯೆ ಕಲಿತೆ. ನನ್ನಿಂದ ಕಲಿತ ವಿದ್ಯೆ ಮರೆತುಹೋಗಲಿ' ಎಂದು ಶಪಿಸುತ್ತಾರೆ. ವರ್ಣವೈಷಮ್ಯ ಇಲ್ಲಿ ಮತ್ತೊಮ್ಮೆ ಪ್ರಕಟವಾಗಿದೆ. ಮುಂದೆ ಕರ್ಣನ ಕಥೆ – ಕರ್ಣಭೇದನ, ಕರ್ಣಾವಸಾನಗಳಲ್ಲಿ ಸಂಕ್ಷಿಪ್ತವಾಗಿ ಕೊನೆಗೊಳ್ಳುತ್ತದೆ.

ಕೌಶಿಕ(ವಿಶ್ವರಥ) ವಸಿಷ್ಠರಿಂದ ಪರಾಜಿತನಾಗಿ ಬ್ರಹ್ಮರ್ಷಿಯಾದ ಕಥೆ – ಕೌಶಿಕ ಚರಿತ್ರೆ, ವಿಶ್ವಾಮಿತ್ರ ಪ್ರತಾಪ, ಪ್ರಚಂಡ ವಿಶ್ವಾಮಿತ್ರ ಹೀಗೆ ಬೇರೆಬೇರೆ ಪ್ರಸಂಗಗಳಲ್ಲಿ ಪ್ರಕಟವಾಗಿ ರಂಗದಲ್ಲಿ ಮೆರೆದಾಡಿದೆ. ಕರ್ಣನ ಕುರಿತು ನಾಕಾರು ಪ್ರಸಂಗಗಳು ಜನಪ್ರಿಯವಾಗಿ ಈಗಲೂ ರಂಗದಲ್ಲಿ ವಿಜೃಂಭಿಸುತ್ತವೆ. ಒಂದೇ ಕಥೆ ಮತ್ತೆ ಮತ್ತೆ ಹೊಸ ದೃಷ್ಟಿಯಿಂದ, ಹೊಸ ಚಿಂತನೆಯಿಂದ ಕಾಲೋಚಿತವಾಗಿ–ಕಲೋಚಿತವಾಗಿ ಪ್ರಕಟವಾಗುತ್ತಿದ್ದು ಸಿದ್ದಕಟ್ಟೆಯವರ ರಚನೆಯೂ ಈ ದೃಷ್ಟಿಯಿಂದಲೇ ಆದುದು. ಎರಡು ಕಥೆಗಳನ್ನೂ ಒಂದೇ ರಾತ್ರಿಯಲ್ಲಿ ಪ್ರದರ್ಶಿಸಬಹುದು. ಸಮಯದ ಮಿತಿಯಲ್ಲಿ ಒಂದೊಂದು ಕಥೆಗಳನ್ನು ಪ್ರತ್ಯೇಕವಾಗಿ ಪ್ರದರ್ಶಿಸಲೂ ಬಹುದು.

ರಾಗ, ತಾಳ, ಲಯಗಳ; ವೈವಿಧ್ಯಮಯ ಛಂದೋಬಂಧಗಳ ಮೂಲಕ ಸಿದ್ದಕಟ್ಟೆಯವರ ಕವಿಚಾತುರ್ಯವಿಲ್ಲಿ ಕಾಣಿಸಿಕೊಂಡಿದೆ. ಎರಡನೆಯ ಭಾಗದ ಕರ್ಣಕಥೆಯಲ್ಲಿ ಕುಮಾರವ್ಯಾಸನ (ಕರ್ಣಾಟಕಭಾರತ ಕಥಾಮಂಜರಿ) ದಟ್ಟ ಪ್ರಭಾವವನ್ನು ನಾವಿಲ್ಲಿ ಕಾಣುತ್ತೇವೆ. ಕೆಲವೊಮ್ಮೆ ಅಲ್ಲಿಯ ಪದ್ಯವನ್ನೇ ಬಳಸಿಕೊಂಡಿವೆ. ಹಿಂದಿನ ಕವಿಗಳು ತಮ್ಮ ಪ್ರಸಂಗಕೃತಿಗಳಲ್ಲಿ ಪೂರ್ವಕವಿಗಳ ಪದ್ಯಗಳನ್ನು ಸ್ವೀಕರಿಸಿದ್ದಾರೆ. ಇದು ಕೃತಿಚೌರ್ಯವಲ್ಲ. ಪೂರ್ವಕವಿಗೆ ಸಂದ ಸಹೃದಯಗೌರವವೆಂದೇ ಪರಿಭಾವಿಸಬೇಕು.

'ವರ್ಣವೈಷಮ್ಯ' ರಂಗಭೂಮಿಯಲ್ಲಿ ಸದಾ ಪ್ರದರ್ಶನಗೊಳ್ಳುವ ಸಾಮರ್ಥ್ಯ ಹೊಂದಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಸಿದ್ದಕಟ್ಟೆಯವರ ಅಕಾಲಿಕ ನಿಧನಾನಂತರ ಈ ಕೃತಿ ಪ್ರಕಟವಾಗುತ್ತಿರುವುದು ಒಂದು ದೃಷ್ಟಿಯಿಂದ ಅವರ ಸಂಸ್ಮರಣೆಗೆ ಅಕಾಡೆಮಿಯು ಸಲ್ಲಿಸುತ್ತಿರುವ ಕಾಣಿಕೆಯೇ ಸರಿ.

೧೪ ಮಾರ್ಚ್ ೨೦೧೭ — ಅಂಬಾತನಯ ಮುದ್ರಾಡಿ

# – ವರ್ಣವೈಷಮ್ಯ– ೧

## ಪಾತ್ರಗಳು

* ದೇವೇಂದ್ರ
* ದಿಕ್ಪಾಲಕರು
* ಸುರ ನರ್ತಕಿಯರು – ರಂಭೆ ಇತ್ಯಾದಿ
* ರುಚಿಕ
* ಸತ್ಯವತಿ
* ವಿಶ್ವರಥ
* ನೀಳಾಂಬರೆ –ಸಖಿಯರು
* ವಸಿಷ್ಠ
* ಸೈನಿಕರು
* ಭೂತನಿಕರ
* ಶಬಲೆ
* ಶಕ – ಯವ
* ಶಿವ
* ಕೌಶಿಕ
* ತ್ರಿಶಂಕು
* ಮುನಿಕುಮಾರರು

## – ವರ್ಣವೈಷಮ್ಯ– ೨

### ಪಾತ್ರಗಳು

* ಕುಂತಿ
* ವಸುಷೇಣ
* ಅದಿರಥ
* ಅದಿರಥನ ಹೆಂಡತಿ
* ಏಕಲವ್ಯ }
* ಹಿರಣ್ಯಧನು }
* ದ್ರೋಣ
* ಪರಶುರಾಮ
* ಕೌರವರು }
* ಪಾಂಡವರು }
* ಕೃಷ್ಣ
* ಕರ್ಣ
* ಅರ್ಜುನ
* ಶಲ್ಯ
* ಸರ್ಪಾಸ್ತ್ರ
* ವೃದ್ಧ ಬ್ರಾಹ್ಮಣ

# ವರ್ಣವೈಷಮ್ಯ – ೧

## ಭಾಮಿನಿ

ಜಂಭಜಿತುವೀತೆರ ಸುಧರ್ಮಕ ।
ಸಂಭ್ರಮದ ಸಭೆ ಯಕ್ಷಪೀಠದಿ ।
ಅಂಬುಜಾಪ್ತನ ತೆರದೊಳೊಪ್ಪಿರೆ ಕೇಳಿ ಮುಂಗಥೆಯ ॥
ಅಂಬುಜಾಕ್ಷನ ಸುತನು ಮಸೆದೊಗೆ ।
ದಂಬುಗಳೊ ಯೆನೆ ಬರುತಲಲ್ಲಿಗೆ ।
ರಂಭೆ ಮೊದಲಾಗಿರುವ ಸುರಗಣಿಕೆಯರು ನರ್ತಿಸಲು ॥ ೧ ॥

## ಆರ್ಯಸವ್ಯಾ – ಏಕ

ಸುರಸತಿಯರ ಮೈಮಾಟದ ಬಳುಕಿಗೆ ।
ಸುರತತಿ ವಿಭ್ರಮೆಗೊಂಡಿರಲು ॥
ಸ್ಮರನ ವಿಲಾಸದ ರೂಪಕ ದರ್ಶನ ।
ದೊರಕಿದುದಾಸುರ ಸಭೆಯೊಳಗೆ ॥ ೧ ॥

ರಸಿಕರ ಮಾನಸ ವೀಣೆಯ ತಂತಿಯ ।
ನೆಸೆವ ನೋಟದಲಿ ಮೀಟಿದರು ॥
ವೊಸರಿದುದಮೃತ ಅಧರಧಿ ಕಿರುನಗೆ ।
ಬೆಸೆದುದು ಮಧುವಿಗೆ ಸವಿಯಾಗಿ ॥ ೨ ॥

## ಆರ್ಯಸವ್ಯಾ – ಏಕ

ತಕಿಟ ತಕಿಟಧಿಮಿ ತಕ್ಕಿಟ ತಕಧಿಮಿ ।
ತಕಝುಣು ತಕಧಿಮಿ ಧಿಮಿರೆನುತಾ ॥
ಸಕುಟಿಲಗುರುಳೆಯರಾಡುತಲಿತ್ತರು ।
ಸುಕಲಾರಸದೌತಣ ಸಭೆಗೆ ॥ ೩ ॥

## ತ್ರಿವುಡೆ

ಇಂತಿರುವ ಸುರಸಭೆಗೆ ಬಂದಾ ।
ಕಂತುಹರಸಮ ಸಪ್ತಋಷಿಗಳು ।
ನಿಂತಭಯ ಮುದ್ರೆಯಲಿ ಪಠಿಸಲು ॥ [ಶಾಂತಿಮಂತ್ರ ೧] ॥

ಅಸತೋಮಾ ಸದ್ಗಮಯಾ ।
ತಮಸೋಮಾ ಜ್ಯೋತಿರ್ಗಮಯ ।
ಮೃತ್ಯೋರ್ಮಾ ಅಮೃತಂಗಮಯ ॥
ಶಾಂತಿ ಶಾಂತಿ ಶಾಂತಿಃ ॥

(ಓಲಗ ಮುಗಿದುದು)

## ॥ ಕಾಂಬೋಧಿ –ಝಂಪೆ ॥

ಅತ್ರಿ ಅನಸೂಯೆಯರ । ಸ್ವಸ್ಥ ದಾಂಪತ್ಯದಲಿ ।
ಪುತ್ರನುದಿಸಿದ ಶೀತಕರನು ॥
ಪೃಥ್ವಿಯಲಿ ಪೆಸರಾಯ್ತು । ಮತ್ತೆ ಶಶಿವಂಶವೆಂ ।
ದುತ್ತಮ ನೃಪಾಲಕರ ಪಡೆದು ॥ ೧ ॥

ಆಪರಂಪರೆಯೊಳಗೆ । ಭೂಪಾಲ ಕುಶಿಕ ಮ ।
ತ್ತಾ ಪರಾಕ್ರಮಿಗೆ ಗಾಧಿ ॥
ತಾಪಹರ ಕುಲಕೀರ್ತಿ । ಕಾಪಿಡುತ ಬೆಳಗಿದನು ।
ಭೂಪಾಲಪಂಕ್ತಿಯಲ್ಲಿ ॥ ೨ ॥

ಬಳಿಕ ಪುರುಕುತ್ಸುಸುತೆ । ಯಳವರಿಸೆ ಕುಶಿಕಜನು ।
ಲಲನೆಯಾ ಸತ್ಯವತಿಯುದಿಸೆ ॥
ಜಲಜಮುಖಿಯಳನು ಭೃಗು । ಕುಲಜ ರುಚಿಕನು ವರಿಸಿ ।
ಕೆಲಕಾಲ ಕಳೆಯೆ ಕೇಳಿತ್ತ ॥ ೩ ॥

ಸತ್ಯವತಿಯೊಂದು ದಿನ । ಮಾತೆಯಭಿಮತವ ಮುನಿ ।
ನಾಥಗೆಂದಳು ವಿನಯದಿಂದ ॥
ಪ್ರೀತ ಕೇಳೈ ಸುತನ ಮಾತೆ ಬಯಸಿಹಳು ಸ ।
ತ್ವಾತಿಶಯನಹ ಸುತನ ನೀಡು ॥ ೪ ॥

॥ ಕಾಂಬೋಧಿ – ಝಂಪೆ ॥

ವನಿತೆಯರ ಮನದ ಬಗೆ । ವನಜನಾಭನೆ ಬಲ್ಲ ।
ನೆನುತ ಮುನಿವರ ರುಚಿಕ ನಗುತ ॥
ಅನುಕರಿಸಿ ಮಂತ್ರ ಚರು । ವನು ವಿಭಾಗಿಸುತ್ತಿತ್ತ ।
ತನುಜೆ ತಾಯರ್ಗೆ ಬೇರ್ಬೇರೆ ॥ ೫ ॥

ವಿಧಿಮನದ ಹಂಚಿಕೆಗ । ಳದುಭುತವನೇನೆಂಬೆ ।
ಬದಲಾಗಿ ಹೋಯ್ತು ಮಂತ್ರಾನ್ನ ॥
ವಿಧುಮುಖಿಯರದ ಭುಜಿಸಿ । ಮುದದಿ ಗರ್ಭವ ತಳೆಯೆ ।
ಚದುರಿದುವು ನವಮಾಸ ಬಳಿಕ ॥ ೬ ॥

ಶುಭಕರಣ ಯೋಗ ತಿಥಿ । ಶುಭದ ನಕ್ಷತ್ರದಲಿ ।
ನಭದಿಂದಲಿಳಿದರ್ಕನಂತೆ ॥
ಅಬಲೆ ಮುನಿಸತಿಗುದಿಸೆ । ಪ್ರಭೆಯೊಳಾ ಜಮದಗ್ನಿ ।
ವಿಬುಧಗಡಣವು ಹರಸೆ ಸುತನ ॥ ೭ ॥

ಮತ್ತೆ ಮಂತ್ರಾನ್ನದಲಿ । ಪೃಥ್ವಿಪಾಲಕ ಸತಿಗೆ ।
ಪುತ್ರಸಂ ಜನನವಾಗಿರಲು ॥
ಋತ್ವಿಕರು ನೆರೆದು ರಚಿ । ಸುತ್ತ ಪುಣ್ಯಾರ್ಚನೆಯ ।
ಮತ್ತವಗೆ ವಿಶ್ವರಥನೆಂದು ॥ ೮ ॥

॥ ಕಾಂಬೋಧಿ – ಝಂಪೆ ॥

ತರಳ ಸಿತಚಂದ್ರಮನ । ತೆರದಿ ವೃದ್ಧಿಸುತಲಿರೆ ।
ಗುರುಮುಖದಿ ಶಸ್ತ್ರ ಶಾಸ್ತ್ರಗಳ ॥
ತಿರುಳನರಿವಂತೆಸಗಿ ಧರಣಿಪತಿ ಗಾಧಿ ತವ ।
ತರಳನಿಂದಭಿಷೇಕ ಗೈಸಿ ॥ ೯ ॥

ಕೆಲಕಾಲ ಗಾಧಿ ಭೂ । ಲಲನೆಪತಿತನದಿರವ ।
ಕಲಿಸಿದನು ವಿಶ್ವರಥನಿಂಗೆ ॥
ಬಳಿಕ ಕನ್ಯಾರತ್ನಗಳ ತಂದು ವೈವಾಹ ।
ನಲವಿನಿಂ ಗೈಸಿರ್ದ ನಮಗೆ ॥ ೧೦ ॥

॥ ಸೌರಾಷ್ಟ್ರ – ತ್ರಿವುಡೆ ॥

ಸತ್ವದಲಿ ಹರಿಯಂತೆ ಭೂಮಿಪ ।
ತಿತ್ವದಲಿ ಸ್ವರದಾಣ್ಮಗೆಣೆಯಂತೆ ।
ಪೃಥ್ವಿಪಾಲಕ ವಿಶ್ವರಥ ತಾ । ನರ್ತಿಯಿಂದ ॥ ೧ ॥
ಧರಣಿ ಲಲನೆಯ ಮೌಕ್ತಿಕವು ಯೆನಿ ।
ಸಿರುವ ವರ ಕೌಶಾಂಭಿ ದೇಶವ ।
ಪೊರೆದ ಶಶಿಕುಲ ಮೌಳಿ ಕುಂದುಗ । ಳಿರದ ತೆರದಿ ॥ ೨ ॥

॥ ಸೌರಾಷ್ಟ್ರ – ತ್ರಿವುಡೆ ॥

ಹರುಷ ದರ್ಪ ಕ್ರೋಧ ಲಜ್ಜಾ ।
ತುರುತೆ ಮಾನಾದಿಗಳೊಳಾ ನೃಪ ।
ನಿರತ ಸಂಯಮಿ ಕಾರ್ಯಕೌಶಲ । ಪರಿಣತಿಯಲಿ ॥ ೩ ॥

॥ ಮಧ್ಯಮಾವತಿ ॥

ಒಂದು ದಿನ ನೃಪ ವಿಶ್ವರಥ ನೀ ।
ಸಿಂಧು ವಸನೆಯ ಚಿತ್ರ ವಿಲಸಗ ।
ಳಂದದಾಸ್ವಾದನೆಗೆ ತಾ ಮನ । ದಿಂದ ಬಗೆದು ॥ ೪ ॥
ಕರೆಸಿದನು ನೀಳಾಂಬರೆಯರನು ।
ತರಿಸಿ ಮಣಿರಥವೇರಿ ಬೆಂಬಲ ।
ಕಿರದೆ ಅಕ್ಷೋಹಿಣಿಯ ಸೇನೆಯ । ವೆರಸಿ ಪೊರಟ ॥ ೫ ॥

॥ ಭಾಮಿನಿ – ಕಲ್ಯಾಣಿ ॥

ಚರಿಸಿ ಕಂಡನು ಸಕಲ ರಾಜ್ಯಗ ।
ಳಿರದೆ ತೀರ್ಥಕ್ಷೇತ್ರಗಳ ನದಿ ।
ಗಿರಿ ವನಾದಿ ನಿಸರ್ಗ ರಮಣೀಯತೆಗಳೆಲ್ಲವನು ॥
ಬರುತಲೊಂದೆಡೆ ಕಂಡನೈ ಹಿಮ ।
ಕರನ ಆಡುಂಬೊಲವೊ ಋತುಗಳ ।
ಅರಸುವಿನ ಶಸ್ತ್ರಾಲಯವೊ ಎಂದೆನಿಪ ತಾಣವನು ॥ ೧ ॥

॥ ಜಂಜೂಟಿ – ರೂಪಕ ॥

ವಿಮಲೆಯರೇ ನೋಡಿ ಪೂತ । ದ್ರುಮದ ಸೊಬಗನು ॥
ಕಮಲಭವನು ಸೃಷ್ಟಿಗಿಟ್ಟ । ಅಮಿತ ಮೆರುಗನು ॥
ದ್ರುಮವ ಬಳ್ಳಿ ಬಾಚಿ ತಬ್ಬಿ ಹಬ್ಬಿಕೊಂಡಿದೆ ।
ಸುಮದ ಕಂಪು ಮಾರುತನಲಿ । ಸಖ್ಯ ಬೆಳೆಸಿದೆ ॥ ೧ ॥

ಫಲಿತ ತರುವು ಪಯಣಿಗನ ಕೈ । ಬೀಸಿ ಕರೆದಿದೆ ।
ಸಲಿಲ ತುಂಬಿ ಸರಸಿ ಭರತ । ನಾಟ್ಯವಾಡಿದೆ ॥
ಚೆಲುವ ನವಿಲು ಮುಗಿಲ ಕಡೆಗೆ । ನೋಡಿ ನಲಿದಿದೆ ।
ಬಿಳಿಯ ಮುಗಿಲು ಶ್ವೇತಛತ್ರ । ವನ್ನು ಹಿಡಿದಿದೆ ॥ ೨ ॥

॥ ವೃಂದಾವನ ಸಾರಂಗ – ಏಕ ॥

ಹುಲ್ಲೆಮರಿಯು ಹುಲಿಯ ಹಾಲ । ಹೀರಿ ಕುಡಿದಿದೆ ।
ಚೆಲ್ಲುಗಂಗಳಿಂದ ನೋಡುತೋಡಿ ಕುಣಿದಿದೆ ॥
ಮೆಲ್ಲನುರಗ ಮುಂಗುಸಿಯನು । ಸುತ್ತಿ ಬಳಸಿದೆ ।
ಚೆಲ್ವ ಹೆಡೆಯ ಬಿಚ್ಚುತೀಗ । ಘೂತ್ಕರಿಸುತಿದೆ ॥ ೩ ॥

ಮಾಂದಳಿರನು ತಿಂದು ಪಿಕವು । ಕುಹೂ ಎನುತಿದೆ ।
ಅಂದದರಗಿಣಿಗಳು ಫಲವ । ಕುಕ್ಕಿ ತಿನುತಿವೆ ॥
ಚೆಂದದಿಂದ ಹಸಿರು ಸೀರೆಯುಟ್ಟ ಭೂರಮೆ ।
ಇಂದು ವಧುವಿನಂದ ತಳೆದು । ನಿಂತ ತೆರಭ್ರಮೆ ॥ ೪ ॥

॥ ಭಾಮಿನಿ – ತೋಡಿ ॥

ಜಾತಿ ವೈರವ ತೊರೆದು ಮಿಗಗಳು ।
ಪ್ರೀತಿಯಲಿ ಬೆರೆತಿಹುದ ಕಾಣುತ ।
ಭೂತಳೇಶನು ಬೆರಗುವಟ್ಟಿರೆ ಬಂದ ಮುನಿವಟುವು ॥
ಸಾತಿಶಯದಲಿ ಪೇಳ್ದನೈ ಮುನಿ ।
ನಾಥ ಮೈತ್ರಾವರುಣಿಯಾಶ್ರಮ ।
ಈತರಂಗಣಿ ತಟದೊಳಿಹುದೆನೆ ಕೇಳ್ದು ಗಾಧಿಜನು ॥ ೧ ॥

॥ ಅಷ್ಟತಾಳ – ಕಲ್ಯಾಣಿ ॥

ಭರಿತ ತೋಷವಗೊಂಡನಾಗ । ಮುನಿ ।
ವರನನ್ನು ಕಾಣುವ ಯೋಗ ॥
ಅರಸಿ ಬಂತೆನುತಲಿ ಧರಣೀಪಾಲಕ ತನ್ನ ।
ಪರಿವಾರ ಸಹ ಹೊರವಂಟನಾಶ್ರಮಕಾಗಿ ॥ ೧ ॥

ಅನತಿ ದೂರದಿ ರಥ ನಿಲಿಸಿ । ಜನ ।
ಪನು ಕಾಲನಡಿಗೆಯ ವೆರಸಿ ॥
ಕನಕನಿರ್ಮಿತ ಹರಿವಾಣದಿ ಕಾಣಿಕೆ ।
ಯನು ತಂಬಿ ಶಿರದೊಳಾಂತಾಯೆಡೆ ಬರುತಲಿ ॥ ೨ ॥

॥ ವಾರ್ಧಿಕ – ತೋಡಿ ॥

ತಾರಾಸಮೂಹ ಮಧ್ಯದೊಳಿರುವ, ಹಿಮಕರನೋ ।
ರಾರಾಜಿಸುವ ಸುರಪ ಸಭೆಯೊಳಿಹ, ಧಿಷಣನೋ ।
ಯಾರಾರಿವರೆಂಬ ಭ್ರಮೆಯಡಸಿಹುದು ಅರೆಕ್ಷಣದಿ
ವಾಸ್ತವನರಿತು ಮತ್ತೆ ॥

ನಾರೀಜನವ ಹಿಂದೆ ನಿಲಿಸಿ ನಡೆತಂದಾಗ ।
ಭೂರಮಣ ಭಕ್ತಿಯಲಿ ಸಾಷ್ಟಾಂಗವೆರಗಿರುವ ।
ಸಾರವರಿತಾಗ ಮುನಿತಿಲಕ ನಸುನಗುತ ಬೆಸಗೊಂಡ
ಕರುಣದ ಭಾವದಿ ॥ ೧ ॥

॥ ಬೇಗಡೆ – ಅಷ್ಟ ॥

ಯಾರು ಪೇಳ್ನೈ ನೀನು ಭೂರಮಣ । ಸಂತೋಷದಲಿ ಪರಿ ।
ವಾರ ಸಹ ಬಂದಿರುವುದೇನ್ ಹದನ ॥
ಭೂರಿ ತೋಷವನಾಂತೆ ನಿನ್ನಯ ।
ಪಾರ ಭಕ್ತಿಗೆ ಬೆಳಗಲ್ಯೆ ತವ ।
ವೀರಸಿರಿದಶದಿಸೆಗಳಲಿ ಪೇಳ್ ।
ವಾರಿಜಾಪ್ತನ ತೇಜ ವಿವರವ ॥ ೧ ॥

॥ ಭಾಮಿನಿ – ಬಿಲಹರಿ ॥

ವೀತರಾಗನು ನುಡಿದನೆಲೆ ಭೂ ।
ನಾಥ ಸಂಶಯ ಬೇಡ ಮನದಲಿ ।
ನಾ ತಳೆವೆ ಸಂತೃಪ್ತಿ ತವಪರಿವಾರಕುಣಬಡಿಸಿ ।
ಯೀತತ್ಕ್ಷಣ ನೀವು ಸಕಲರು ।
ಸ್ನಾನರಾಗಿರಿ ಎನೆ ಧರಾಧಿಪ ।
ಸಾತಿಶಯದಲಿ ಸ್ನಾನಕಪ್ಪಣೆಯಿತ್ತ ಸಕಲರಿಗೆ ॥ ೧ ॥

॥ ತ್ರಿವುಡೆ ॥

ಬಳಿಕ ಸಕಲರು ಮಿಂದು ಮುನಿಕುಲ ।
ತಿಲಕನಾಶ್ರಮ ಕೈತರಲು ಮುನಿ ।
ಲಲನೆ ಬಡಿಸಿದಳೆಲ್ಲರಿಗೆ ತಾ । ಯೊಲವಿನಿಂದ ॥ ೧ ॥

॥ ತ್ರಿವುಡೆ ॥

ಷಡುರಸದ ಭೋಜನದಿ ತೃಪ್ತಿಯ ।
ವಡೆಯೆ ಸಕಲರು ಯೋಚಿಸಿದ ಧರೆ ।
ಯೊಡೆಯ ಸಂಪದವೆತ್ತಣದು ಯೀ । ಬಡಮುನಿಪಗೆ ॥ ೨ ॥

॥ ನವರೋಜ್ – ಏಕ ॥

ಮಣಿಯುತ ಗಾಧಿಜ ಮುನಿಗೆ । ಮನ ।
ದನುಮಾನ ಪೇಳಿದ ಕಡೆಗೆ ॥
ಜನಪರ ಹೊರತನ್ಯರಿಗಿದು ಅಸದಳ ।
ಯಿನಿತೈಶ್ವರ್ಯದ ನೆಲೆಯರುಹೆಂದನು ॥ ೧ ॥

॥ ನವರೋಜು – ಏಕ ॥

ಲಾಲಿಸು ಭೂಪತಿ ನೀನು । ನಾ ।
ಪೇಳುವೆನ್ಯೆ ಸಕಲವನು ।
ಯೀ ಲೋಕದಿ ಬರಗಾಲಗಳಡಸಿದ ।
ಕಾಲಕೆ ಯಜ್ಞವ ಲೀಲೆಯೊಳೆಸಗಲು ॥ ೨ ॥

ಅನುವಾಗಲೆನಗೆನುತಾ । ಸುರ ।
ಪನುದಯದಿ ತಾನಿತ್ತಾ ॥
ಅನುನಯದಲಿ ಸುರಧೇನುವು ಶಬಲೆಯ ।
ಮನಸಿನ ಕಾಮಿತವೀವಳು ಕರುಣದಿ ॥ ೩ ॥

॥ ಭಾಮಿನಿ ಅರ್ಧ ॥

ಪೇಳಲೇನೈ ಮುನಿಯ ವಚನದಿ ।
ಭೂಲಲಾಮನ ಒಳಮನದಿ ದು ।
ರ್ಲಾಲಸೆಯು ಮೊಳೆತಿರಲು ಪೇಳಿದ ಮೌನಿಪುಂಗವಗೆ ॥

॥ ಝಂಪೆ (ಎರಡನೇ ಕಾಲ) ॥

ಮುನಿಕುಲೋತ್ತಮ ಲಾಲಿಸು । ಅರುಹುವೆನು ।
ಮನದ ಬಯಕೆಯ ಪಾಲಿಸು ॥
ಕನಕರಾಶಿಯ ನೀವೆನು । ತುರುರತ್ನ ।
ವೆನಗೀಯೊ ದಯದಿ ನೀನು ॥ ೧ ॥

॥ ಝಂಪೆ ॥

ಹೋಮ ಹವನಾದಿಗಳನು । ನಡೆಸೆ ಸು ।
ತ್ರಾಮಪತಿ ನೀಡಿರುವನು ॥
ಕಾಮಧೇನುವ ನೀಯೆನು । ನೀನೀವ ।
ಹೋಮರಾಶಿಯ ಬಯಸೆನು ॥ ೨ ॥

॥ ಕೇದಾರಗೌಳ – ಹಂಸಧ್ವನಿ ॥

ತುರುಕೋಟಿಯೀವೆ ನಿನಗೆ । ಅನುನಯದಿ ।
ಸುರತುರುವನಿತ್ತರೆನಗೆ ॥
ನಿರತ ಯಜ್ಞಾದಿಗಳನು । ನಡೆಸುವರೆ ।
ಸಿರಿಸಂಪದಗಳೀವೆನು ॥ ೩ ॥

ಮುನಿದ್ರವ್ಯ ಬ್ರಹ್ಮತ್ವವ । ಬಯಸೆ ಜನ ।
ಪನುಕಳೆವ ಸರ್ವಸ್ವವ ॥
ವಿನುತ ನೀತಿಯ ಪೇಳಿದೆ । ಕೆಡುಗಾಲ ।
ವನು ಕರೆಯದಿರು ಸಾರಿದೆ ॥ ೪ ॥

ಖಾತಿಯಲಿ ಮುನಿಗೆಂದನು । ನಿನ್ನಿಂದ ।
ನೀತಿ ಶ್ರವಣಕೆ ಬಂದೆನೆ ॥
ಭೂತಳಾಧಿಪನ ಮುಂದೇ । ಬಡವಿಪ್ರ ।
ಗೇತರೌದ್ಧಟ್ಯ ಹಂದೆ ॥ ೫ ॥

॥ ಭಾಮಿನಿ ಅರ್ಧ ॥

ಭರಿತ ರೋಷದಿ ಭೃತ್ಯವರ್ಗಕೆ ।
ವೊರೆದ ಧೇನುವ ಸೆಳೆಯುತೀಕ್ಷಣ ।
ಪುರಕೆ ಕೊಂಡೊಯ್ಯುವುದು ಕಾಂಬೆನು ವಿಪ್ರನಧಟುಗಳ ॥

॥ ಸೌರಾಷ್ಟ್ರ ತ್ರಿವುಡೆ ॥

ಅನಿತರಲಿ ನೃಪಸೇನೆ ಮುತ್ತಿಹು ।
ದನಿಮಿಷರ ಹಸುವನ್ನು ಕೊರಳಿಂ ।
ಗನುಕರಿಸಿ ನೇಣುವನು ಸೆಳೆಯಲು । ವನಿತೆ ಶಬಲೆ ॥ ೧ ॥

ಭರದಿ ಹುಂಕರಿಸುತ್ತ ತನುವ- ।
ನ್ನಿರದೆ ಝಾಡಿಸಿ ಸೈನ್ಯನಿಕರವ ।
ಧರೆಗೆ ಕೆಡುಹುತಲೋಡುತಲಿ ಮುನಿ । ವರನ ಬಳಿಗೆ ॥ ೨ ॥

ಹೊರಳುತಲಿ ಮುನಿಪದದಿ ಪೇಳ್ದಳು ।
ತೊರೆದೆಯಾ ಕರುಣವನು ಭಟರಪ ।
ಹರಿಸಿ ಸೆಳೆದೊಯ್ಯುವರು ರಕ್ಷಿಸು । ಕರುಣಶರಧಿ ॥ ೩ ॥

ಬೇಲಿಯೇ ಬೆಳೆ ಮೇಯ ಹತ್ತಿತು ।
ಭೂಲಲಾಮನೆ ಪ್ರಜೆಯ ದಂಡಿಪ ।
ಕಾಲವೈಷಮ್ಯವಿದು ಕೇಳೆಲೆ । ಬಾಲೆ ನೀನು ॥ ೪ ॥

ಆಲಿಸೆಲೆ ಮುನಿಪಾಲ ಕ್ಷಾತ್ರವ ।
ಮೇಳವಿಸಿದರೆ ದೌಷ್ಟ್ಯ ವಿಪ್ರರು ।
ತಾಳಬಹುದೇ ನೀಡು ಶಿಕ್ಷೆಯ । ಖೂಳರಿಂಗೆ ॥ ೫ ॥

ಬ್ರಹ್ಮತೇಜವನಿನಿತು ಕಾರ್ಯಕೆ ।
ಅನ್ನ ಬಳಸುವುದುಚಿತವಲ್ಲವು ।
ನಿರ್ಮಿಸುತ ಸೈನಿಕವ ನಿಲ್ಲಿಸು । ಹಮ್ಮನವರ ॥ ೬ ॥

॥ ಭಾಮಿನಿ ಅರ್ಧ ॥

ಯಿನಿತು ಕೇಳ್ದಾ ದಿವ್ಯಸುರಭಿಯು ।
ಮನದ ಸಂಕಲ್ಪದಲಿ ಪಪ್ಲವ ।
ವೆನುತ ಸೈನ್ಯವು ಭೂತ ಬೇತಾಳಾದಿಗಳ ಸೃಜಿಸೆ ॥ ೧ ॥

॥ ಮಾರವಿ – ಏಕ ॥

ಧಾರಿಣಿ ಬಿರಿದುದೊ ಮೇರುವೆ ಜರಿದುದೊ । ಭೂರಿ ಶರಧಿ ತಾನೂ ॥
ಮೇರೆವರಿದು ಮುತ್ತಿದುದೋ ಎಂಬಂ । ತಾರುಭಟಿಸುತಾಗ ॥ ೧ ॥

॥ ಮಾರವಿ – ಏಕ ॥

ಬರುತಿಹ ಭೂತನಿಕರ ಕಾಣುತಲಾ । ಧರಣಿಪ ಸೈನ್ಯಗಳೂ ॥
ಅರಿತಂತೋಡಲು ವಿಶ್ವರಥನು ತಾ । ನುರುತರರೋಷದಲಿ ॥ ೨ ॥
ಶರದಲಿ ಭೂತೋಚ್ಚಾಟನ ಮಂತ್ರವ । ಧರಣಿಪ ನೆಲೆಗೊಳಿಸಿ ॥
ಬರುತಿಹ ಪಪ್ಲವ ಸೇನೆಯ ಚದುರಿಸೆ । ಲರಿತಾ ಸುರದೇನು ॥ ೩ ॥

॥ ಝಂಪೆ ॥

ರೋಷದಲಿ ಮತ್ತೊಮ್ಮೆ । ಅಂಬಾರವವ ಗೈಯ ।
ಲಾ ಸಮಯದಲ್ಲಿ ಜನಿಸಿದರು ॥
ಭೀಷಣ ಪರಾಕ್ರಮದ ಶಕಯವರು ಕಂಗಳಲಿ ।
ಸೂಸಿ ಕೆಂಗಿಡಿಯನಾಕ್ಷಣದಿ ॥ ೧ ॥
ಯೇತಕೆಮ್ಮಯ ಸೃಷ್ಟಿ । ಮಾತೆ ಪೇಳೌ ಕಣ್ಣೋ ।
ಳೇತಕೀ ಕಂಬನಿಯ ಧಾರೆ ॥
ಯಾತುಧಾನರ ಭಯವೊ । ಮಾತೆ ಸಲಹುವ ಮೌನಿ ।
ನಾಥಮನ ನೋಯಿಸಿದನೇನು ॥ ೨ ॥

॥ ಝಂಪೆ ॥

ಉಸುರಿದಳು ಸುರಭಿ ನಾ । ಪೆಸರಿತ್ತೆ ಶಕಯವರು ।
ರಸೆಯೊಳಗೆ ನಿಮಗೆ ಸಮ್ಮತದಿ ॥
ವಸುಧೀಶ ವಿಶ್ವರಥ । ನಸಮ ಸಾಹಸದಿಂದ ।
ದೆಸೆಗೆಡಿಸಿ ಸೆಳೆದೊಯ್ವನೆನ್ನ ॥ ೩ ॥

ತುರುವಿಪ್ರ ಸ್ತ್ರೀಯರನು । ನಿರತ ಪಾಲಿಪಧರ್ಮ ।
ದಿರವ ಮರೆತನೆ ಭೂಮಿಪಾಲ ॥
ಮರುಗದಿರು ಕಂಬನಿಯ । ಸುರಿಸಿದಕೆ ಪ್ರತಿಯಾಗಿ ।
ಹರಿಸುವೆವು ನೃಪರುಧಿರಧಾರೆ ॥ ೪ ॥

॥ ಭಾಮಿನಿ ॥

ಈ ತೆರದೊಳಪ್ಪಣೆಯಗೊಳುತಲಿ ।
ಖಾತಿಯಲಿ ನಡೆತಂದು ಮಲೆಯುತ ।
ಭೂತಳಾಧಿಪ ಪಥ ನಿರೋಧಿಸಿ ನುಡಿದರವನೊಡನೆ ॥ ೧-೨ ॥

॥ ಭೈರವಿ – ಅಷ್ಟ ॥

ಉರ್ವೀಶ ನಿಲ್ಲೊ ನೀನು । ಮಾತುಗಳುಂಟು ।
ಗರ್ವವ ತೋರದಿನ್ನು ॥
ಗೀರ್ವಾಣಪತಿಯಿತ್ತ ಧೇನುವ ಸೆಳೆಯೊಯ್ಯೆ ।
ಸರ್ವವ ಕಳೆವೆ ನೀನು ॥ ೧ ॥

॥ ಭೈರವಿ – ಅಷ್ಟ–ಏಕ ॥

ಕಂಡಾಗ ಗಹಗಹಿಸಿ । ಪೇಳಿದ ಗಾಧಿ ।
ಕಂದನುಪಚಾರಿಸಿ ॥
ಕಂಡರೆ ಪೋರರು ನೀತಿಯ ಪೇಳುವು ।
ದ್ದಂಡತನವ ನಿಲ್ಲಿಸಿ ॥ ೨ ॥

ರೋಗಿಗೌಷಧ ಪಥ್ಯವೆ । ವಿಷಯಾಸಕ್ತ ।
ಭೋಗಿಗೆ ಶ್ರುತಿ ಸ್ತುತ್ಯವೇ ॥
ಯೀಗ ಸಾರಿದೆ ಕೃತ್ಯವಿದ ನೀನು ಬಿಡದಿರೆ ।
ಸಾಗುವೆ ಯಮಪುರಕೆ ॥ ೩ ॥

ಅರ್ಕನಾರೋಗಣೆಗೆ । ದೀಪವ ತೋರ್ವ ।
ಮೂರ್ಖರೇನೆಂಬೆ ನಿಮಗೆ ।
ತರ್ಕವೇಕೆನುತಲಿ ಧನುವ ಝೇಂಕರಿಸುತ್ತ ।
ಲರ್ಕಾರಿ ಕುಲಜ ತಾನ ॥ ೪ ॥

॥ ಭಾಮಿನಿ ॥

ಅನುವರದಿ ಶಕ ಯವರ ಸೋಲಿಸಿ ।
ಬಣಗು ಮುನಿಪನ ಹಮ್ಮನಿಳಿಸುವೆ ।
ನೆನುತ ನರಪತಿ ಸುತರುನೂರ್ವರ ಕರೆಯುತುಸುರಿದನು ॥
ವನಧಿಯಾಪ್ತನ ಕುಲದಿ ಜನಿಸಿದ ।
ಜನಪ ಪಂಕ್ತಿಯ ಮಾನದದ್ರಿಯ ।
ತೃಣವು ಚಾಳಿಸಿದಂದವಾಯಿತು ಶಿಕ್ಷಿಸಿರಿ ಮುನಿಯ ॥ ೧ ॥

॥ ಸೌರಾಷ್ಟ್ರ ತ್ರಿವುಡೆ ॥

ಜನಕನಾಜ್ಞೆಯ ಶಿರದಿ ಧರಿಸುತ ।
ಎಣಿಕೆಯಲಿ ಶತ ಬಾಲಕರು ಬಂ ।
ದಿನ ಶತಪ್ರಭ ಮುನಿ ವಸಿಷ್ಠನ ಕೆಣಕಲಂದು ॥ ೧ ॥

ಮುತ್ತಿದರು ದಶ ದಿಶೆಯೊಳಾತನ ।
ನಿತ್ಯಕರ್ಮದ ಪರಿಕರಾದಿಗ ।
ಳೆತ್ತಿ ಬಿಸುಟರು ಬ್ರಹ್ಮದಂಡವ । ಕಿತ್ತುಕೊಳಲು ॥ ೨ ॥

ಯೇರಿ ಬರುತಿಹ ಗಾಧಿ ಪೌತ್ರರ ।
ಭಾರಿದಂಡನು ಕಂಡು ಮುನಿ ಮದ ।
ನಾರಿಯಂದದಿ ರೌದ್ರ ತಳೆಯುತ । ಭೂರಿರವದಿ ॥ ೩ ॥

॥ ಭಾಮಿನಿ ॥

ಮುನಿದು ಹುಂಕಾರವನು ಗೈಯ ।
ಲ್ಕನಿತರಲಿ ಪ್ರಳಯಾಗ್ನಿರುದ್ರನ ।
ಫಣೆಯ ಕಣ್ಣಿಂ ಸಿಡಿದುದೋಯೆನೆ ಮುನಿಯ ಮುಖದಿಂದ ॥
ಘನತರತ ಜ್ವಾಲಾಗ್ನಿ ಛಿಟಿ–
ಛಿಟಿಲೆನುತುದಿಸಿ ಬೆಂಬತ್ತಿ ಬಂದಾ ।
ಜನಪ ಸುರತರನು ಕ್ಷಣದಿ ಭಸ್ಮೀಭೂತ ಗೈದಿರಲು ॥ ೧ ॥

### ॥ ಆನಂದಭೈರವಿ – ರೂಪಕ ॥

ಏಕೆ ತಾಪಸಿಯನ್ನ ಕೆಣಕಿ ಬಾಲಕರನ್ನು ॥
ನೂಕಿದೆ ಮೃತ್ಯುದವಡೆಗೆ ॥
ಯೇಕೆ ಹಂಬಲಿಸಿದೆ ಬರಿದೆ ಧೇನುವನಕಟ
ಟೇಕಿಂತ ವಿಧಿಯಾಯ್ತು ಶಿವನೆ ॥ ೧ ॥

ಇನಿತು ಹಂಬಲಿಸಿ ಮತ್ತಿರದೆ ಮಾನಸದಲ್ಲಿ ।
ಜನಪಾಲ ಸ್ಥಿತಪ್ರಜ್ಞೆಯಾಂತು ॥
ಯೆನಗೀ ನಿರಾಶೆಯ ಭಾವವು ತರವಲ್ಲ ।
ಜನಪರಿಗಪಮಾನವಹುದು ॥ ೨ ॥

### ॥ ಭಾಮಿನಿ ॥

ಯೆಮ್ಮ ವಂಶದ ಮೂಲಪುರುಷನಿ
ಗೊಮ್ಮೆ ಕ್ಷಯ ಮತ್ತೊಮ್ಮೆ ವೃದ್ಧಿಯು ।
ವೊಮ್ಮೆ ಸೋತರೆ ಮತ್ತೆ ಗೆಲುವಗೆ ಮೂಲಮಂತ್ರವದು ॥
ಸುಮ್ಮನಿಹನವ ಮೂರ್ಖ ಜಗದಲಿ ।
ಕಮ್ಮಗೋಲಾರಿಯನು ಮೆಚ್ಚಿಸಿ ।
ಮನ್ಮನದ ದ್ವೇಷವನು ತೀರ್ಚುವೆನೆನುತ ಪೊರವಂಟ ॥ ೧ ॥

### ॥ ತ್ರಿವುಡೆ ॥

ದೃಢಮನದಿ ನಡೆತರುತ ಹಿಮಗಿರಿ ।
ಯೆಡೆಗೆ ಶೋಧಿಸಿ ಸುಸ್ಥಳವನಾ ।
ಮೃಡನ ತಪವನು ಗೈವ ತವಕದಿ ।
ಪೊಡವಿಪತಿ ತಾ ಕಂಡನು ॥ ೧ ॥

ಹರಿಯುತಿಹ ಕಿರುದೊರೆಯನದರೊಳು ।
ವಿರಚಿಸುತ ಸ್ನಾನಾದಿ ಕರ್ಮವ ।
ಧರಿಸಿದನು ಕೃಷ್ಣಾಜಿನವನವ ।
ತೊರೆಯುತಾ ಭೂಷಣಗಳ ॥ ೨ ॥

॥ ವಾರ್ಧಿಕ – ಮಧ್ಯಮಾವತಿ ॥

ಬಲಿದು ಪದ್ಮಾಸನವ ನಾಸಾಗ್ರದಲಿ ದೃಷ್ಟಿ ।
ನೆಲೆಗೊಳಿಸಿ ನಿರತ । ಪ್ರಾಣಾಯಾಮ ತಂತ್ರದಲಿ ।
ಬಳಿಕ ವಾಸ್ತವ ಮರೆಯುತಾತ್ಮವನು ಶಿವನೊಳನು
ಸಂಧಿಸಿದ ಧ್ಯಾನಮುಖದಿ ॥
ಎಲೆ ಪುರಾಂತಕ, ನಿಟಿಲನೇತ್ರ, ಭೂತೇಶ, ಗಿರಿ ।
ಲಲನೆಪತಿ, ಶಶಿಚೂಡ, ಸುರತರಂಗಿಣಿ ಧರೆಗೆ
ಒಲಿದೆನ್ನ ವಾಂಛೆಗಳ ಸಲಿಸಿ ಕೃತಕೃತ್ಯನಂ
ಮಾಡಭಯಪ್ರದನ ದಯದಿ ॥ ೧ ॥

॥ ನವರೋಜು – ಏಕ ॥

ಅರಿಯುತಲಾತನ ತಪವಾ । ಬಿಳೀ ।
ಗಿರಿತೊರೆದೈ ತರುತಭವಾ ॥
ತೊರೆ ತಪವನು ಮನ । ದಿರವೊರೆ ನರಪತಿ ।
ಯಿರದನುಮಾನವು । ಕರುಣಿಪೆನೆನೆ ಶಿವ ॥ ೧ ॥

ಕೊಡು ಮಂತ್ರಾಸ್ತ್ರಗಳೆನಗೆ । ಶರ ।
ತೊಡುವ ಚಮತ್ಕೃತಿ ಕಡೆಗೆ ॥
ಬಿಡುಗಣ್ಣರು ಮೇಣ್ । ಧಡಿಗ ಖಳರು ಕಿ ।
ತ್ತಡಿಗಳು ಸಹಯೀ । ಪೊಡವಿ ಗೆಲುವ ಬಲ ॥ ೨ ॥

ಅಸ್ತೆನುತಾ ಶಂಕರನೂ । ತಾ ।
ಸ್ವಸ್ಥದಲೀ ತೆರಳಿದನೂ ॥
ಪೃಥ್ವಿಪ ಬಲು ಮಂ । ತ್ರಾಸ್ತ್ರವ ಪಡೆಯುತ ।
ತಪ್ತರೋಷ ವ । ಸಿಷ್ಠಾಶ್ರಮದೆಡೆ ॥ ೩ ॥

॥ ಸೌರಾಷ್ಟ್ರ ತ್ರಿವುಡೆ ॥

ಹರನು ಮೆಟ್ಟಿಸಿಕೊಂಡು ಭುಸುಗುಡು ।
ವ್ಯಾಳನಂತಾ ನೃಪತಿ ಶರಗಳ ।
ಜಾಲದಲಿ ಮುತ್ತಿದುದನರಿತಾ । ವೇಳೆಯಲಿ ॥ ೧ ॥

ಅಗ್ನಿಹೋತ್ರಾದಿಗಳ ನೀತೆರ ।
ಭಗ್ನಗೊಳಿಸಿದನ್ಯಾರೆನುತ ಪ್ರಳ ।
ಯಾಗ್ನಿಯಂತಾ ಮುನಿವಸಿಷ್ಠನು । ವ್ಯಗ್ರನಾಗಿ ॥ ೨ ॥

॥ ಬಿಲಹರಿ – ಅಷ್ಟತಾಳ ॥

ಏತಕೆ ಬರಿದೆ ನೀ ಮುನಿವೆ । ಇಂತು ।
ಖಾತಿಯ ತಳೆದರೆ ದಣಿವೆ ॥
ಕ್ಷಾತ್ರಕ್ಕೊಡ್ಡಿದೆಯಾ ಸವಾಲ । ಅದು ।
ಹೇತುವಾಯಿತು ಸರ್ವನಾಶಕ್ಕೆ ಕೇಳು ॥ ೧ ॥
ಕಾಳೋರಗನ ಹೆಡೆ ತುಳಿದೆ । ಅಂದು ।
ಖಳ ವ್ಯಾಘ್ರನ ಮೀಸೆಯೆಳೆದೆ ॥
ಕಾಲಕಾಲನ ದಯೆಯಿಂದ । ಶರ ।
ಜಾಲಮಂತ್ರವು ಸಹ ಕೈಗೂಡಿತೆಂದ ॥ ೨ ॥

(ಶರಪ್ರಯೋಗ ಮಾಡುವುದು)

॥ ತ್ರಿವುಡೆ ॥

ಕ್ಷೋಣಿಪತಿಯೀತೆರ ಪಚಾರಿಸಿ ।
ಮೌನಿಗೆಸೆಯಲು ಮಂತ್ರಶರಗಳ ।
ಏನೆನಲಿ ಶರಜಾಲ ತಣಿದುದು । ಹಾನಿಗೊಡದೆ ॥ ೧ ॥
ಹರನು ತಾನೊಲಿದಿತ್ತ ಮಂತ್ರದ ।
ಶರತತಿಯು ವೈಫಲ್ಯ ತೋರಲು ।
ಬೆರಗುವಡೆದಾ ಬ್ರಹ್ಮಶಕ್ತಿಯ । ನರಸ ತೆಗೆದು ॥ ೨ ॥

॥ ಭಾಮಿನಿ ॥

ಶರದ ಮುಖದಲಿ ಬ್ರಹ್ಮಮಂತ್ರವ ।
ನಿರಗೊಳಿಸುತೆಸೆಯಲ್ಕೆ ನಭದಲಿ ।
ಸುರರು ಹಾ ಧರೆಯುರಿದು ಹೋಯ್ತೆಂದೊರಲುತಿರೆ ॥

॥ ತ್ರಿವುಡೆ ॥

ಹರನ ಕಣ್ಣುರಿಯಂತೆ ಬರೆ ಮುನಿ ।
ಧರಿಸಿದನು ವರ ಬ್ರಹ್ಮದಂಡದಿ ।
ವೊರೆಯಲೇನ್ ಬ್ರಹ್ಮಾಸ್ತ್ರವದರೊಳು ಲೀನವಾಯ್ತಾಗ ॥ ೧ ॥

॥ ತ್ರಿವುಡೆ – ಕಾಂಭೋದಿ ॥

ಹರನ ಬಳುವಳಿಯಿಂತು ಮುನಿಪನ ।
ಪರಮ ತೇಜದೊಳೈಕ್ಯವಾಗಿರೆ ।
ಧರಣಿಪತಿ ಕಡುನಾಚಿ ನಿಂದಿರ । ಲೊರೆದ ಮುನಿಪ ॥ ೧ ॥

॥ ಅಷ್ಟತಾಳ – ಬಿಲಹರಿ ॥

ನೋಡಯ್ಯ ಭೂಪಾಲ ಸ್ಥಿತಿಯ । ನೀನು ।
ಹೂಡಿದಸ್ತ್ರಕೆ ಬಂದ ಗತಿಯ ॥
ಓಡಿ ಪೋಗದೆ ನಿಂತೆಯೇಕೆ । ನೀನು ।
ಮಾಡಿದ ಕೃತ್ಯಕ್ಕೆ ಫಲವದು ಸಾಕೇ ॥ ೧ ॥
ಛಲ ಬೇಕು ಕ್ಷತ್ರಿಜಾತರಿಗೆ । ತೋಳ ।
ಬಲವಿಹುದಾರ್ತ ರಕ್ಷಣೆಗೆ ॥
ಛಲಬಲ ದ್ವೇಷಸಾಧನೆಗೆ । ಬಳ ।
ಸಲು ಕೆಡುಕಪ್ಪುದು ತಿಳಿದುಕೋ ಕಡೆಗೆ ॥ ೨ ॥

॥ ವಾರ್ಧಿಕ ॥

ಎಲೆ ನೃಪಾಲಕ ಕೇಳು, ಅಜವೆತ್ತ ಗಜವೆತ್ತ ।
ಉಲಿವ ಶುಕ ತಾನೆತ್ತ, ಘೂಕ ಘೂಂಕೃತಿಯೆತ್ತ ।
ತಳಿರುಂಬ ಪಿಕವೆತ್ತ, ಹೊಸಲು ವಾಯಸವೆತ್ತ
ಪರಿಕಿಸಲು ಕ್ಷಾತ್ರತೇಜ ॥
ನಳಿನಾಪ್ತನಿದಿರು ದರ್ಪಣವು । ತಾ ಪೊಳೆವಂತೆ ।
ಬಲುಹು ಕ್ಷಾತ್ರವನೆತ್ತಿ ಕೆಡಬೇಡ ನೀತಿಯನು
ತಿಳಿದುಕೋ, ಬ್ರಹ್ಮತೇಜೋಬಲವೆ ಬಲವು
ಮಿಕ್ಕ ಬಲ ಬಲವಲ್ಲವು ॥ ೧ ॥

॥ ತ್ರಿವುಡೆ – ಹಂಸಧ್ವನಿ ॥

ಬ್ರಹ್ಮತೇಜೋ ಬಲವೆ ಬಲವಹು ।
ದೆಮ್ಮ ತೋಳ್ಬಲ ಸುಡಲಿ ಸಾಧಿಸಿ ।
ಬ್ರಹ್ಮತೇಜವ ಪಡೆವೆ ಸೂಚಿತ । ಕರ್ಮದಿಂದ ॥ ೨ ॥

ಘೋರ ತಪವಾಚರಿಸಿ ಪಡೆವೆನ ।
ಪಾರ ಮಹಿಮೆಯ ಬ್ರಹ್ಮಋಷಿಪದ ।
ತೋರಬೇಕೀ ಮುನಿಪಗೆನ್ನಯ । ಭೂರಿಛಲವ ॥ ೩ ॥

ನಿಂದಿಸಿರುವೀ ಔರ್ವಶೇಯನು ।
ವಂದಿಪನಕವು ವಿಶ್ರಮಿಸೆ ನಾ ।
ನೆಂದೆನುತ ಪೊರವಂಟ ಗಾಧಿಯ । ಕಂದ ತಪಕೆ ॥ ೪ ॥

(ತ್ರಿಶಂಕುವಿನ ಒಡ್ಡೋಲಗ)

॥ ಸೌರಾಷ್ಟ್ರ ತ್ರಿವುಡೆ ॥

ದ್ಯುಮಣಿಕುಲದೀಪಕನಯೋಧ್ಯಾ ।
ರಮಣನಾದ ತ್ರಿಶಂಕು ಭೂವರ ।
ವಿಮಲಕೀರ್ತಿಗೆ ಕಲಶ ಸಮ ಪ್ರತಿ । ಯಮರಪತಿಯು ॥ ೧ ॥

ಕ್ಷಾಮ ಕ್ಷಯರುಜೆಯಾತನಾಳುವ ।
ಭೂಮಿಯನು ಸೋಂಕಿರದು ಸದ್ಗುಣ ।
ಧಾಮನೋಲಗವಿತ್ತ ಸಜ್ಜನ । ಸ್ತೋಮ ಸಹಿತ ॥ ೨ ॥

ಸೂತ ಮಾಗಧ ಮಂತ್ರಿ ಸುಭಟ ।
ವ್ರಾತವನು ಮನ್ನಿಸುತ ಭುವನ ।
ಖ್ಯಾತ ಗುರುವಿನೊಳೆಂದ ಮನಸಿನ । ಕಾತರವನು ॥ ೩ ॥

॥ ಸುರುಟಿ – ಏಕ ॥

ಲಾಲಿಸು ಗುರುವರನೇ । ಮನ್ಮನ । ದಾಳದ ಬಯಕೆಯನೇ ॥
ಕಾಲಪಿತನ ಕುಲದೇಳಿಗೆಗೋಸುಗ ।
ಬಾಳನು ಸವೆಸುವ ಶೀಲ ಕೃಪಾಕರ ॥ ೧ ॥

ಏರುವಾಸೆ ಮನಕೇ । ನಾ ಸಶ । ರೀರನಾಗಿ ಸ್ವರಕೇ ॥
ಭೂರಿ ತಪೋನಿಧಿ । ತೋರು ಪಥವನೆನೆ ।
ಭೀರುತ ನಗೆ ಸುರ । ನಾರಿಜ ನುಡಿದನು ॥ ೨ ॥

ಆಗದಾಗದಯ್ಯ । ಬಯಕೆಯು । ಸಾಗದು ಎಲೆ ರಾಯ ।
ಲೋಗರಿಗಿದು ಸರಿ । ಹೋಗದ ನುಡಿ ಸುರ ।
ಭೋಗವು ದೊರಕದು । ಯೀಗ ಸದೇಹದಿ ॥ ೩ ॥

ಇನಕುಲಸಂಜಾತ । ಮಹಾಭಿಷ । ನನು ಕಳುಹಿದ ಮಾತಾ ॥
ಮುನಿಪತಿ ಮರೆತೆಯ । ಅನುಕರಿಸೆಜ್ಞವ ।
ನಿನಗಸದಳವೇ । ನೆನಲು ವಸಿಷ್ಠನು ॥ ೪ ॥

ಹಿತದಿ ಪೇಳ್ದನವಗೇ । ಮಹಾಭಿಷ । ಪತನ ಹೊಂದಿ ಕಡೆಗೆ ॥
ನತಯಶನಾದನು । ಹಿತವಲ್ಲವು ದು ।
ರ್ಗತಿ ಬಹುದೆನಲಾ । ಕ್ಷಿತಿಪತಿ ದುಗುಡದಿ ॥ ೫ ॥

## ॥ ಸೌರಾಷ್ಟ್ರ ತ್ರಿವುಡೆ ॥

ನದಿಯ ನಡುವಲಿ ಕೈಯ ಬಿಟ್ಟಂ ।
ತಿದುವರೆಗೆ ರಕ್ಷಿಸಿದ ಗುರುವೇ ।
ಬದಲು ನುಡಿದರೆ ಅನ್ಯಮಾರ್ಗವು । ಇದೆಯೆನುತ್ತ ॥ ೧ ॥

ತೆರಳಿದನು ವಾಸಿಷ್ಠರೆಡೆಗಾ ।
ಧರಣಿಪತಿ ಕೈಮುಗಿದು ಸಕಲವ ।
ನರುಹೆ ತಿಳಿದಾ ಗುರು ತನೂಭವ । ರೊರೆದರವಗೆ ॥ ೨ ॥

ಕುಲಪುರೋಹಿತನಾಗದೆಂದರೆ ।
ಸಲುವುದೇ ಛಲ ಶಾಸ್ತ್ರ ನಿಯತಿಯ ।
ತಿಳಿದಿರುವ ನೆಮ್ಮಯ್ಯ ನಡೆಸೆವು । ಬಳಲ್ಯಾಕೆ ॥ ೩ ॥

ಯೆನಲು ಕ್ರೋಧದೊಳೆಂದ ನಿಮ್ಮನು ।
ಅನವರತ ನಾ ನೆಚ್ಚಿಕೊಂಡುದ ।
ಕಿನಿತು ಗೈದಿರಿ ಗರ್ವದಲಿ ಯೆಂ । ದೆನಲಿಕಾಗ ॥ ೪ ॥

ಕೆಂಡವಾದರು ಮುನಿಕುಮಾರರು ।
ಭಂಡ ಛೀ ಚಂಡಾಲ ತೊಲಗ್ಯೆ ।
ಕಂಡೆಯಾ ಗುರುವಿನಲಿ ಕೊರತೆಯ । ನೆಂದು ಶಪಿಸೆ ॥ ೫ ॥

॥ **ಭಾಮಿನಿ ಅರ್ಧ** ॥

ಶಾಪ ವಾಕ್ಯವ ಕೇಳಿ ಮನದನು ।
ತಾಪದಲಿ ಕಡುನೊಂದು ತೆರಳಿದ ।
ತಾಪಕಿರಣ ಕುಲೋದ್ಭವನು ನಿಜನಗರ ಮುಖವಾಗಿ ॥

॥ **ಆರ್ಯಸವಾಯಿ – ಏಕ** ॥

ವೊರೆಯುವುದೇಕೆ ತ್ರಿಶಂಕುವಿನಪದೆಸೆ ।
ಗುರುಸುತರಾಡಿದ ನುಡಿ ಫಲಿಸೆ ॥
ದೊರೆಯನು ಬಗೆದು ಚಂಡಾಲನೆಂದೆನುತಲಿ ।
ವೊರೆದನು ದ್ವಾರದ ರಕ್ಷಕನು ॥ ೧ ॥

॥ **ಸೌರಾಷ್ಟ್ರ ತ್ರಿವುಡೆ** ॥

ಬಂದು ಪಾದಕೆ ನಮಿಸಲಾ ಮುನಿ ।
ಯೆಂದನೇನ್ಯೆ ನೃಪತಿ ದೇಹವಿ ।
ದಂದ ಗೆಟ್ಟಿಹುದೇಕೆನಲು ನೃಪ । ನೆಂದನವಗೆ ॥ ೧ ॥

॥ **ಪೀಲು – ಅಷ್ಟತಾಳ** ॥

ವೀತರಾಗನೆ ಕೇಳು ನಾನೆಂಬ ಮಾತ ।
ಭೂತ ದಯಾಪರವಹ ಮೌನಿ ನಾಥ ॥
ಆತುಕೊಂಬೆನನಾಥನಂತೆ ನಿನ್ನುವನು ।
ಪ್ರೀತಿಯೊಳೆನಗೊಂದಧ್ವರಗ್ಯೆಯೊ ನೀನು ॥ ೧ ॥
ಯಾಗ ಸಂಕಲ್ಪ ಭೌತಿಕ ದೇಹದಿಂದ ।
ಭೋಗಲೋಕವ ಸೇರುವುದು ಗಾಧಿ ಕಂದ ।
ಯೀಗ ಬೇಡುವೆ ಅಲ್ಲ ಇಲ್ಲವೆಂದೆನದೆ ।
ಸಾಗಿಸೆಜ್ಞವ ಪರಕರವೀವೆ ಕ್ಷಣದಿ ॥ ೨ ॥

॥ ಏಕ – ಮಧ್ಯಮಾವತಿ ॥

ಮುನಿನಾಥ ನಗುತೆಂದ ಮರುಳು ಭೂವರನೆ ।
ಜನಪ ಪಂಕ್ತಿಯೊಳಿಂಥ ಹುಂಬರ ಕಾಣೆ ॥
ಮನುಜ ದೇಹದಿ ನಾಕ ಸೇರಿಸುವಂಥ ।
ಘನತಪಸಿಗಳಿಲ್ಲ ಯಾಕಯ್ಯ ಪಂಥ ॥ ೧ ॥

॥ ತುಜಾವಂತು ಅಷ್ಟತಾಳ ॥

ಧರಣೀಪಾಲಕನೆಂದ ಕರುಣಾಸಾಗರನೆ ।
ಧರೆಯೊಳಗಸದಳ ನಿವಗೆಂದೆಂಬುದನೆ ॥
ವೊರೆದೆಯಾದರೆ ನಂಬಲಾರೆ ನಿಶ್ಚಯವು ।
ಗುರುವಸಿಷ್ಠನ ಕೈಯೊಳ್ಸಾಗದ ಕ್ರತುವು ॥ ೧ ॥

॥ ಸೌರಾಷ್ಟ್ರ ತ್ರಿವುಡೆ ॥

ಸಾಕು ಇನ್ನೊರೆಯದಿರು ಹಗೆಯಹ ।
ಕಾಕುಮುನಿಪನ ಪೆಸರು ಸುರಪನ ।
ಲೋಕದೊಂದಿಪೆ ಮಾಡಿ ಸದ್ವರ । ವೇಕೆ ತಡವು ॥ ೧ ॥

॥ ವಾರ್ಧಿಕ ॥

ಎಂದಖಿಲ ವಸ್ತುವಂ ತರಿಸಿದಂ ಭರಿಸಿದಂ ।
ಚಂದದಲಿ ರಾಯಸವ ಕಳುಹಿದಂ ತಿಳುಹಿದಂ ।
ಬಂದು ನೆರೆದಿಹ ಸಕಲ ಮುನಿಗಳಂ ಜನಗಳಂ
ಕಂಡತುಲ ತೋಷದಿಂದ ॥
ಕುಂದಿಲ್ಲದಂತೆ ಸತ್ಕರಿಸಿದಂ ಯಿರಿಸಿದಂ ।
ಸಂದಣಿಸಿರುವ ವಿಪ್ರ ಮಂತ್ರದಿಂ ತಂತ್ರದಿಂ ।
ಅಂದು ಘನತರವಾದ ಹೋಮದಿಂ ಧೂಮದಿಂ
ಕಂಗೊಳಿಪೆ ಸಿದ್ಧಾಶ್ರಮ ॥ ೧ ॥

॥ ಸೌರಾಷ್ಟ್ರ ತ್ರಿವುಡೆ ॥

ಹವಿಯನುಂಬರೆ ಮಂತ್ರ ಮುಖದಲಿ ।
ದಿವಿಜರನು ಕರೆದಾಗ ಬರದಿರೆ ।
ಜವನ ತೆರ ಕ್ರೋಧದೊಳಗಾ ಮುನಿ । ಭುವಿಯನೊದೆದು ॥ ೧ ॥

ಪ್ರೋಕ್ಷಿಸಲು ಮಂತ್ರೋದಕವ ಜಗ ।
ಚಕ್ಷು ಕುಲಜನು ಮೇಲೆ ಮೇಲಕೆ ।
ಕುಕ್ಷಿಯನು ಬಿಟ್ಟೇರ್ದ ಸರ್ಗಕೆ । ಆಕ್ಷಣದಲಿ ॥ ೨ ॥

ಆ ಪುರಂದರನರಿತು ಗುರುವಿನ ।
ಶಾಪದಲಿ ಚಂಡಾಲನಾಗಿಹ ।
ಭೂಪನಾಕಕೆ ಭ್ರಷ್ಟನೆನುತಲಿ । ಕೋಪದಿಂದ ॥ ೩ ॥

॥ ಕಾಂಬೋಧಿ – ಝಂಪೆ ॥

ತಡೆದೆಂದ ಸುರಪನವಗೆ । ಗುರುದ್ರೋಹಿ ।
ನಡೆ ಹಿಂದೆ ಬಂದ ಹಾಗೆ ॥
ಪಡೆವುದಕೆ ಸ್ವರ್ಗ ಭೋಗ । ಬಲು ಹಿಂದೆ ।
ನಡೆಸಿಹೆನು ನೂರು ಯಾಗ ॥ ೧ ॥

ಯಾಗಹವಿಯನು ಗೊಂಬರೆ । ಬರದುಳಿಯು ।
ತೀಗ ನೀ ಹೀಗೆಂಬರೆ ॥
ಬೀಗಿಹೆಯ ಘನ ಮದದಲಿ । ಸುರಲೋಕ ।
ಭೋಗವುಳುಹುವ ನೆವದಲಿ ॥ ೨ ॥

ಅಧ್ವರ್ಯು ಚಂಡಾಲನು । ನಡೆಸುತಿಹ ।
ನಧ್ವರವ ಕ್ಷಾತ್ರೇಯನು ॥
ಊರ್ಧ್ವ ಲೌಕಿಕರು ಯಿದನು । ಮನ್ನಿಪೆವೇ ।
ಬುದ್ಧಿಹೀನರ ಕ್ರತುವನು ॥ ೩ ॥

ಅನಿಮಿಷರ ಹಂಗೇತಕೆ । ತಪಃಶಕ್ತಿ ।
ಯನು ವ್ಯಯಿಸುತೀನಾಕಕೆ ।
ಮುನಿಯೆನ್ನ ದೇಹ ಸಹಿತ । ಕಳುಹಿರುವು ।
ದನುಮತಿಸು ಮರೆತು ಭ್ರಾಂತ ॥ ೪ ॥

ಎಲೆ ಭೂಪ ಶಾಪ ನಿನಗೆ । ಬೀಳುವುದು ।
ತಲೆಯು ಕೆಳಗಾಗಿ ಧರೆಗೆ ॥
ಮುಳಿದು ಸುರಪಾಲನೆನಲು । ಬೀಳುತಿರೆ ।
ನೆಲನಧಿಪ ಕೂಗುತಿರಲು ॥ ೫ ॥

ಗುರುವೆ ನಾಕವ ಸೇರಿದೆ । ನೋಡೀಗ ।
ಸುರಪ ಶಾಪದಿ ಜಾರಿದೆ ॥
ಧರೆಗುರುಳುತಿರುವೆನೆನ್ನ । ಮುನಿಪಾಲ ।
ಕರುಣದಲಿ ಸಲಹೊಯೆನ್ನ ॥ ೬ ॥

॥ **ಮಾರವಿ – ಏಕ** ॥

ಕೇಳುತಲಾರ್ತಧ್ವನಿಯನು ಮುನಿಕುಲ ।
ಮೌಳಿಯು ಪಲ್ಗಡಿದೂ ॥
ಬೀಳಗೆಡಹಿದನೆ ಸುರಪತಿ ನಿನ್ನನು ।
ತಾಳೆನುತಲಿ ತಡೆದು ॥ ೧ ॥

॥ **ಭಾಮಿನಿ** ॥

ಕರವ ಶಿರದಿಂ ಮೇಲೆ ನೆಗಹುತ ।
ಲೊರೆದ ನಿಲು ನಿಲು ನಿಲ್ಲೆಲವೊ ಭೂ ।
ವರನೆ ಸೃಜಿಸುವೆ ನಿನಗೆ ಪ್ರತಿನಾಕವನು ಯೀಕ್ಷಣದಿ ॥
ಪರಮಮುನಿ ಸೃಷ್ಟಿಸಿದ ನಾಕಕೆ ।
ಸರಿಯೆನಿಪ ಲೋಕವನು ಮತ್ತಾ ।
ಸುರಪಗಿಹ ಸೌಭಾಗ್ಯ ಸಕಲವ ನಿರದೆ ನೆಲೆಗೊಳಿಸಿ ॥ ೧ ॥

॥ **ಸಾಂಗತ್ಯ ರೂಪಕ** ॥

ಶ್ವೇತವಾಹನ ಮುನಿನಾಗೆರಗಿ ಪೇಳ್ದ ।
ನೇತರೇ ಪೊಸ ಸೃಷ್ಟಿ ಗುರುವೇ ॥
ಖಾತಿಯು ನಿನಗುಂಟೆ ಕರ್ಮಚಂಡಾಲ ನಿ ।
ಗೇತರ ಕರುಣೆಯೆಂದೆನಲು ॥ ೧ ॥

ಯೆನಗೆ ನೀತಿಯ ಪೇಳ । ಲೆನಿತು ಗರ್ವವೊ ನಿನ ।
ಗನುಮೋದಿಸುವುದೆನ್ನ ವಚನ ॥
ಜನಪ ತ್ರಿಶಂಕುವಿ । ನನುಭೋಗಕಾ ಸ್ವರ್ಗ ।
ಯಿನ ಕುಲೇಶನೆಯಿಂದ್ರನದಕೆ ॥ ೨ ॥

ಸುರತಿಂಥಿಣಿಯನು ಸಂತ್ಯೈಸಿ ವಿಶ್ವಾಮಿತ್ರ ।
ಮೆರೆವ ಪುಷ್ಕರ ತೀರ್ಥದೆಡೆಗೆ ॥
ತೆರಳಿದ ವ್ಯಯಿತ ಶಕ್ತಿಯನು ಸಂಚಯಿಸಲು ।
ಉರುತರ ತಪಗೈವೆನೆನುತಾ ॥ ೩ ॥

॥ ಸೌರಾಷ್ಟ್ರ ತ್ರಿವುಡೆ ॥

ಇತ್ತ ಸುರಪತಿ ಕೌಶಿಕನ ಘನ ।
ವೆತ್ತ ತಾಪಸ ಶಕ್ತಿಯನು ನೆನೆ ।
ಯುತ್ತಿರಲು ಸುರದೂತಮಣಿಯುತ । ಲಿತ್ತ ವರದಿ ॥ ೧ ॥

॥ ಮುಖಾರಿ – ಏಕ ॥

ಸುರನಾಥ ಲಾಲಿಸೈ ನುಡಿಯ । ಅಡಸಿರುವೆಡರ ।
ನ್ನೊರೆಯುದೆಂತು ಯೆಮ್ಮೊಡೆಯ ॥
ವರ ಋಷಿ ಕೌಶಿಕ । ನುರುತರ ತಪದ ।
ಳ್ಳುರಿ ಸುಡುತಿದೆಸ ಸುರ । ರೆರೆಯನೆ ಸಲಹೈ ॥ ೧ ॥

ಹೊಟ್ಟೆಯುಬ್ಬರಿಸುತಿದೆ । ಶ್ವಾಸೋಚ್ಛ್ವಾಸವು ।
ಕಟ್ಟಿ ಕಣ್ಣಲಿ ತಿರುಗುತಿದೆ ॥
ವೊಟ್ಟಿಗೆವುಬ್ಬಸ । ತಟ್ಟನೆಯೇದುಸಿ ।
ರ್ಪಟ್ಟೆವು ಬವಣೆಯ । ನಿಟ್ಟಿಸು ನೀನಿದ ॥ ೨ ॥

॥ ತ್ರಿವುಡೆ ॥

ಸುರರ ಹುಯಿಲನು ಕೇಳಿ ಮಘವನು ।
ಪರಿಹರಕೆ ಪಥ ಕಾಣದಿರೆ ಧರೆ ।
ಯುರಿದು ಹೋಹುದೆನುತ್ತ ರಂಭೆಯ । ಕರೆದು ನುಡಿದ ॥ ೧ ॥

॥ ಝಂಪೆ ॥

ನಳಿನಮುಖಿ ರಂಭೆ ಕೇಳು । ಗಾಧಿಜನ ।
ಬಲು ತಪಾನಲದ ಗೋಳು ॥
ಕಳವಳಿಸುತಿಹುದಾಧರೆ । ತೆರಳೀಗ ।
ನಿಲಿಸುವುದು ಬಿಂಬಾಧರೆ ॥ ೧ ॥

ಸುರಗಣಿಕೆಯೆಂದಳವಗೆ । ಮೇನಕೆಯ ।
ವರಮುನಿಯ ಕ್ರೋಧದ ಬಗೆ ॥
ಪೊರೆದಿರುವಳೆನಗೆ ಹಿಂದೆ । ನಾ ಪೋಗೆ ।
ಪರಿಭವವು ಬರದೆ ಮುಂದೆ ॥ ೨ ॥

ತರುಣಿ ಮೋಹದ ಜಾಲದಿ । ಕೆಡೆಯದಿಹ ।
ನರನಿಹನೆ ಮೂರು ಜಗದಿ ॥
ಬರಿದೇಕೆ ಭೀತಿ ನಿನಗೆ । ಪಿಕವಾಗಿ ।
ಬರುವೆ ನಾ ನಿನ್ನ ಜೊತೆಗೆ ॥ ೩ ॥

॥ ಭಾಮಿನಿ ॥

ತರುಣಿಯಳನೊಡಬಡಿಸಿ ಸುರಪತಿ ।
ಸ್ಮರ ವಸಂತರ ಕೊಡುತಲಿ ಪು ।
ಷ್ಕರ ಸುತೀರ್ಥದ ಮುನಿಪನಾಶ್ರಮದೆಡೆಗೆ ಬಂದಾಗ ॥
ಸುರಸತಿಗೆ ಕಣ್ಸನ್ನೆಯಲಿ ತಿಳಿ ।
ಸಿರಲು ಮುನಿಪತಿ ರುದ್ರ ಸತಿಯ ।
ಧ್ವರದಿ ನೀಗಿಸಿಕೊಂಡ ತೆರನಿರೆ ನರ್ತಿಸಿದಳಾಗ ॥ ೧ ॥

॥ ಶ್ಲೋಕ ॥

ಗಂಗಾತರಂಗ ಕಮನೀಯ ಜಟಾಕಲಾಪಂ ।
ಗೌರೀ ನಿರಂತರ ವಿಭೂಷಿತ ವಾಮಭಾಗಮ್ ॥
ನಾರಾಯಣಪ್ರಿಯಂ ಅನಂಗ ಮದಾಪಹಾರಂ ।
ವಾರಾಣಸೀ ಪುರಪತಿಂ ಭಜ ವಿಶ್ವನಾಥಮ್ ॥

॥ ಸುರುಟಿ – ಏಕ ॥

ಸುರಸತಿಯಾಡಿದಳೂ । ಸ್ಮರ ಪೂ । ಶರಗಳ ಪೂಡಿರಲೂ ॥
ಚರಿಸಿ ಮಂದಾನಿಲ । ಸರಿಸಿದ ಮೇಲುದೆ ।
ಸುರಪತಿ ಕೋಗಿಲೆ । ಸ್ವರ ಸಂಗೀತದಿ ॥ ೧ ॥

ಸುರದಾನವ ವೃಂದಾ । ಮಥಿಸಲು । ಶರಧಿಯನದರಿಂದಾ ॥
ಸಿರಿ ತಾ ಜನಿಸುತ । ಹರಿಯೆಡೆ ಸಾರಿದ ।
ಪರಿಯಲಿ ನಾಚುತ । ವರಮುನಿಯಿದಿರಲಿ ॥ ೨ ॥

ಅಜನ ಸಭೆಯೊಳಂದೂ । ನರ್ತಿಸ ।
ಲಜಪಿತ ಭವೆ ಬಂದು ॥
ಗಜಗಾಮಿನಿ ತ । ನ್ನಿಜವರ ವರುಣನ ।
ಭಜಿಸುತ ಪ್ರೇಮದಿ । ನಿಜ ಮರೆತಿಹ ತೆರ ॥ ೩ ॥

॥ ವಾರ್ಧಿಕ ಅರ್ಧ ॥

ಅನಿಮಿಷರ ಕೃತ್ರಿಮದಿ ವಿಷಯವಾಸನೆ ರಹಿತ ।
ಮುನಿಯಾಶ್ರಮವು ಲಲಿತರಸ ರಂಗಸ್ಥಳವಾಗೆ ।
ಮನಸಿಜನ ಶರಹತಿಗೆ ಬೆಚ್ಚಿ ಕಣ್ತೆರೆದಾಗ
ಘುಡುಘುಡಿಸಿ ಗಾಧಿಜಾತ ಅಜ ॥ ೧ ॥

॥ ಸೌರಾಷ್ಟ್ರ ತ್ರಿವುಡೆ ॥

ಎಲಗೆ ದಿವಿಜ ಬಜಾರಿ ರಜತಾ ।
ಚಲದ ಕಂಪನಕಾಗಿ ಸೆರಗಿಲಿ ।
ಸುಳಿಸಿದೆಯ ಮಾರುತನ ಶಾಪವ । ಗೊಳುವುದೀಗ ॥ ೧ ॥

ಬಿಸಜಸಂಭವ ತಪದೊಳಗೆ ಮನ ।
ಬೆಸೆದಿರಲು ಯೀ ಭಗ್ನಯತ್ನವೆ ।
ರಸೆಯೊಳಗೆ ಕಲ್ಲಾಗು ವತ್ಸರ । ದಶಸಹಸ್ರ ॥ ೨ ॥

ಅರಿತ ವಾಣೀರಮಣ ಕೌಶಿಕ ।
ನುರು ತಪದ ಬಗೆಗಳನು ಸಾಕ್ಷಾ ।
ತ್ಕರಿಸಿಕೊಂಬುದೆ ಯೋಗ್ಯವೆನುತವ । ತರಿಸಿ ಬರಲು ॥ ೩ ॥

ಅತುಲತಪ ಸಾಧನೆಗೆ ಮೆಚ್ಚಿದೆ ।
ಹಿತದೊಳಿತ್ತೆನು ಬ್ರಹ್ಮಋಷಿ ಪದ ।
ಅತಿಶಯದ ವರ ಬ್ರಹ್ಮತೇಜವ ಪತಿಕರಿಸುನೀ ॥ ೪ ॥

ಸಾಲದೆಲೆ ವಾಣೀಧವನೆ ಮುನಿ ।
ಲೋಲ ಮೈತ್ರಾವರುಣಿ ಹಿತದಲಿ ।
ಪೇಳಬೇಕೆನೆ ಮುನಿ ವಸಿಷ್ಠನು । ಮೇಳವಿಸಿದ ॥ ೫ ॥

ವರ್ಣವೈಷಮ್ಯದಲಿ ಯೇರಿದೆ ।
ಉನ್ನತದ ಬ್ರಹ್ಮರ್ಷಿ ಪದವಿಗೆ ।
ಯಿನ್ನು ದ್ವೇಷಗಳಿಲ್ಲವೆನೆ ಮುನಿ । ರನ್ನ ನಗುತ ॥ ೬ ॥

॥ ಭಾಮಿನಿ ॥

ಧನ್ಯನಾದೆನು ಮುನಿವಸಿಷ್ಠನೆ ।
ನಿನ್ನ ಸಮದೆತ್ತರಕೆ ಯೇರಿಸು ।
ತೆನ್ನ ಉತ್ಕರ್ಷಕನು ನೀನೆನುತ ತಪ್ಪಿದನು ಭರದಿ ॥
ಯೆನ್ನ ಕವಿತಾ ಪ್ರತಿಭೆ ಮಿತಿಯಲಿ ।
ಬಣ್ಣಿಸಿದೆನೀ ಕೃತಿಯ ಕೊರತೆಗ ।
ಳನ್ನು ಮನ್ನಿಸುತೊಳಿತ ಗ್ರಹಿಸುವುದೆನುತ ಬೇಡುವೆನು ॥ ೧ ॥

ವರ್ಣವೈಷಮ್ಯ (ಉತ್ಕರ್ಷ) ಮುಗಿದುದು
ಕಾಲಾವಧಿ ೪. ೩೦. ಗಂಟೆ

* * *

॥ ಭಾಮಿನಿ ॥

ಪಿತನ ಮರಣಕೆ ಹೇತುವಾದ ಹಿ ।
ತತಿಯ ನಿರಗೊಡೆನೆಂದು ಹಸ್ತಿನ ।
ವತಿಯೆರೆಯ ಜನಮೇಜಯನು ತಾ ಸರ್ಪಯಾಗದಲಿ ॥
ಕ್ಷಿತಿಯೊಳಿಹ ವುರಗಾದಿಗಳ ಸಂ ।
ತತಿಯನಾಹುತಿಗೈದ ಫಲದಲಿ ।
ಕ್ಷಿತಿಪರುಗ್ಣದ ಶಯ್ಯೆಯಲ್ಲಿರೆ ಭಾರತದ ಕಥೆಯ ॥ ೧ ॥

ರಾಯ ಜನಮೇಜಯಗೆ ವೈಶಂ ।
ಪಾಯಮುನಿಪತಿ ಸರ್ಪ ದೋಷಕೆ ।
ಪ್ರಾಯಶ್ಚಿತ್ತವಿದೆಂದು ಪೇಳಿದನಾ ಚರಿತ್ರೆಯಲಿ ॥
ತೋಯಜಾಪ್ತನು ಕೃಷ್ಣನತ್ತೆಯೊ ।
ಳಾಯತದಿ ಪಡೆದಿರುವ ಕಂದನ ।
ಗೇಯ ಬಂಧದ ರೂಪ ಚರಿತೆಯನೊರೆವೆ ನರಿತಂತೆ ॥ ೨ ॥

॥ ಸೌರಾಷ್ಟ್ರ ತ್ರಿವುಡೆ ॥

ವಿಷಮ ತುರಗಗಳೇಳು ರಥದೊಳ ।
ಗೆಸೆವ ಸಾರಥಿ ಹೆಳವ ಚಕ್ರವು ।
ಬಿಸಿಗದಿರ ರಥಕೊಂದೆ ಕರ್ಮದೊ । ಳಸಮನಿಷ್ಠ ॥ ೧ ॥

ಶರಣು ಬಂದ ಸಹಸ್ರಕವಚನ ।
ಪೊರೆದಿಹನು ಬಲುಹಿಂದೆ ಶ್ರೀಹರಿ ।
ಯರಿಯದಂದದಿ ರಥದ ಭಂಗಡೆ । ಯಿರಿಸುತವನ ॥ ೨ ॥

ಇಂತಿರಲು ದೂರ್ವಾಸ ಮುನಿವರ ।
ಕುಂತಿಯಲಿ ಸಂಪ್ರೀತ ಭಾವದಿ ।
ಮಂತ್ರ ಪಂಚಕವಿತ್ತುದರಿತನು । ಅಂತಕಯ್ಯ ॥ ೩ ॥

॥ ಭಾಮಿನಿ ॥

ದೇವನದಿಯಲಿ ಮಿಂದು ಭಕ್ತಿಲಿ ।
ಭಾವಕಿಯು ಜಪಿಸಿರಲು ಮಂತ್ರವ ।
ನಾ ವಧುವಿನಲಿ ಅಂಕುರಾರ್ಪಣಗೈದನಾದಿತ್ಯ ॥
ಯೀ ವಿಧದಿ ಜನಿಸಿರುವ ಕರ್ಣನ ।
ನಾ ವನಿತೆ ಭಯಭೀತಿಯಿಂದುರೆ ।
ದೇವನದಿಯಲಿ ಹಾಯ್ಕಿದಳು ಸಲಹೆನುತ ಕೈಮುಗಿದು ॥ ೧ ॥

॥ ಸೌರಾಷ್ಟ್ರ ತ್ರಿವುಡೆ ॥

ಜಗದ ತಾಯ್ ಜಾಹ್ನವಿಯು ಪ್ರೇಮದಿ ।
ನಗುವ ಕಂದನ ಮುಳುಗಲೀಯದೆ ।
ನೆಗಹಿ ಚಾಚಿರೆ ತಡಿಗೆ ಸೂರ್ಯನ । ಮಗನನಂದು ॥ ೧ ॥

ಅರಸ ಕೇಳಾಯುಷ್ಯ ಬಲುಮೆಯ ।
ಮರಳರಾಶಿಯನೊರೆದು ಕಾಲಲಿ ।
ಧರೆಗೆ ಬೆನ್ನಿತ್ತೊದರುತಿರೆ ಶಿಶು । ವರಸ ತಾನು ॥ ೨ ॥

ಇತ್ತಲದಿರಥನೆನುವ ಸೂತನು ।
ನಿತ್ಯದುದರಂಭರಣಕಾರ್ಯಕೆ ।
ಹೊತ್ತನಿರುಕಿಸಿ ಕರೆದ ತರುಣರ । ಮೊತ್ತವನ್ನು ॥ ೩ ॥

॥ ಏಕತಾಳ (ಜಾನಪದಶೈಲಿ) ॥

ಮುಂಗೋಳಿ ಕೂಗ್ಯಾದ । ಮೂಡು ಕೆಂಪೇರ್ಯಾದ ।
ತಂಗಾಳಿ ತಣ್ಣನೆ ಬೀಸ್ಯಾದ ॥
ರಂಗಾದ ಓಕುಳಿ ಧರೆಮೇಲೆ ಚೆಲ್ಯಾದ ।
ಅಂಗಾನೆ ಭೂತಾಯಿ ನಲಿದಾಳ ॥ ೧ ॥

ಪರಮೇಸಾ ಜಡೆಯಿಂದ । ನಲಿದಿಳಿದು ಬಂದಂಥ ।
ಕರುಣಾಳು ಗಂಗವ್ವ ಹರಿದಾಳ ॥
ಅರೆಹೊಟ್ಟೆ ಹಾಕಿಲ್ಲ ಕುಲಕಸುಬು ನಿಂತಿಲ್ಲ ।
ಇರದೆಮ್ಮ ದಿನನಿತ್ಯ ಕರೆದಾಳ ॥ ೨ ॥

॥ ಏಕತಾಳ (ಜಾನಪದ) ॥

ಕರಿಯ ಮಾಚ ಮಂಜ ಬೇಚ ಬನ್ರಪ್ಪೋ । ಈಗ ।
ಹರಿವ ನದಿಗೆ ಮೀನ ಹಿಡಿವ ಬನ್ರಪ್ಪೋ ॥
ಕಿರಿಯ ದೋಣಿ ಯೇರಿ ಬಲೆಯ ಬೀಸುವಾ । ಕೆಲವ ।
ರಿರದೆ ದೂರ ನಿಂತು ಗಾಳ ಹಾಕುವಾ ॥ ೧ ॥

॥ ಭಾಮಿನಿ ॥

ಹರಿವ ಭಾಗೀರಥಿಗೆ ನಮಿಸುತ ।
ತರುಣರೆಲ್ಲರು ನದಿಗಿಳಿಯಲಾ ।
ಹಿರಿಯ ನದಿರಥ ಪಾಪನಾಶಿನಿ ಸೊಬಗನೀಕ್ಷಿಸುತ ॥
ಬರುತ ಕಂಡನು ಶಿಶುವ ವಿಸ್ಮಯ ।
ವೆರಸಿ ನೋಡಿದ ಮಗುಳೆ ತೆಕ್ಕೆಯೊ ।
ಳಿರದೆ ತೆಕ್ಕೈಸಲ್ಕೆ ರೋದನ ನಿಲಿಸಿ ನಗುತಿರಲು ॥ ೧ ॥

॥ ಸೌರಾಷ್ಟ್ರ ತ್ರಿವುಡೆ ॥

ನೋಡಿದರೆ ಮರ್ತ್ಯರಿಗೆ ಮಗನೇ ।
ರೂಢಿಗತಿಶಯ ತೇಜನಿವನ ಬಿ ।
ಸಾಡಿ ಕಳೆದವಳ್ಯಾವಳೊಯೆಂ । ದಾಡಿ ಮನದಿ ॥ ೧ ॥
ಯೇನು ಋಣದ ವಿಶೇಷವೋ ಮ ।
ತ್ತೇನು ಸುಕೃತವ ಗೈದೆನೋ ಯೀ ।
ಸೂನು ದೊರಕಿದನೆನುತ ತಂದನು । ತಾನು ಮನೆಗೆ ॥ ೨ ॥

॥ ಜಂಜೂಟಿ ರೂಪಕ ॥

ಬಂದು ಸತಿಯನಂದು ಕರೆಯುತೆಂದ ನದಿರಥ ।
ಚಂದಿರಾಸ್ಯೆ ಕುಂದು ಕಳೆಯಿತಿಂದು ನೋಡಿತ್ತ ॥
ಕಂದ ನಗುವ ಮಂದಹಾಸದಂದ ನೋಡೆಲೆ ।
ತಂದೆ ತಾಯಿಯೊಂದ ತಿಳಿಯೆ ತಂದೆ ನೀಗಲೇ ॥ ೧ ॥

ವೊಡನೆ ರಾಧೆ ಪಡೆದು ಮಗುವ ತೊಡೆಯೊಳಾನಿಸಿ ।
ನುಡಿದಳವಗೆ ಬಡವರೆಮಗೆ ಕಡವರವೈಸೆ ॥
ಹಡೆಯದಿರುವ ಕೆಡುನುಡಿಗಳು ತೊಡೆದು ಹೋಯಿತು ।
ಕುಡಿಯು ಕರುಳನೊಡೆದುದೆಂದು ವೊಡಲು ನುಡಿಯಿತು ॥ ೨ ॥

॥ ವಾರ್ಧಿಕ ॥

ತಾಯಿತನದಿರವಳೆವ ಖ್ಯಾತರಾರೀ ಜಗದಿ ।
ತಾಯಿ ತನಗಿವಳೆಂದು ಪ್ರೀತಿಯಲಿ ಶಿಶು ನೋಡೆ ।
ತಾಯಿತನ ಪೀಯೂಷದೊರಕೆಯಂದದಿ ರಾಧೆಸ್ತನದಿ ಪಾಲೊಸರಿದಾಗ ॥
ತಾಯಿತನವೂಡಿದಳು ಎದೆಹಾಲ ರೂಪದಲಿ ।
ತಾಯಿತನವಿಂತು ಸಾಕಾರ ರಾಧೆಯೊಳಾಯ್ತು ರಾಧೇಯ ವಸುಷೇಣಗೆ ॥ ೧ ॥

॥ ತ್ರಿವುಡೆ ॥

ಇತ್ತಲೊಂದಿನ ಯೇಕಲವ್ಯನ । ಚಿತ್ತದಲಿ ಧನುರ್ವೇದದಂಕುರ ।
ಬತ್ತದೆಯೆ ಮೊಳೆದಿರಲು ಸಂತಸ । ವೆತ್ತು ಪೊರಟ ॥
ಜನಕನಾದ ಹಿರಣ್ಯಧನುವನು । ತನಗೆ ಕುಂಭಜನಸ್ತ್ರ ಕೌಶಲ ।
ದನುವ ಪೇಳಿರೆ ಪಡೆದು ಜನಕನೊ । ಳನುಮತಿಯನು ॥ ೨ ॥

॥ ಆರ್ಯಸವ್ಯಾ – ಏಕ ॥

ತರಳನ ಲೀಲವಿನೋದದಿ ಮುಳುಗುತ ।
ಮರೆತಿರೆ ಕಾಲವನದಿರಥನು ॥
ಸರಿದುವು ವತ್ಸರವೊಂದಿನ ಪಿತನಿಗೆ ।
ಯೆರಗಿದ ವಸುಷೇಣನು ಬಂದು ॥ ೧ ॥

॥ ಸುರುಟಿ – ಏಕ ॥

ಯೇನು ಬಂದೆ ಕುವರಾ । ಬಾಲಪ್ರವೀಣ ಕುಲೋದ್ಧಾರ ॥
ಆಸನದಿಲಿ ಪೊಸತೇನಿದು ಕಳೆ ನಿನ ।
ಗೇನಾಸೆಯು ಯೆನೆ ತಾನತಿ ಪ್ರೇಮದಿ ॥ ೧ ॥

॥ ಕೇದಾರಗೌಳ – ಅಷ್ಟತಾಳ ॥

ಲಾಲಿಸು ಪ್ರೇಮದಿ ತಾತ । ನಿನ್ನ ।
ಬಾಲ ಬಿನ್ನೈಸುವ ಮಾತ ॥
ತೋಳೊಳುತ್ಸಹವುಕ್ಕುತಿಹುದು । ಎನಗೆ ।
ಕೋಲವಿದ್ಯೆಯ ಕಲಿವಾಸೆ ಬೇರಿಹುದು ॥ ೧ ॥

॥ ಸುರುಟಿ ಏಕ ॥

ಸೂತರ ಶಿಶು ನಿನಗೇ । ಶಸ್ತ್ರಗ । ಳೇತಕೊ ಕಲಿವ ಬಗೆ ॥
ಭೂತಳಪತಿ ಸಂಜಾತರಿಗಲ್ಲದೆ ।
ಯೀತೆರ ಬಯಕೆಯು ಸಲ್ಲದು ನಿನಗೆನೆ ॥ ೧ ॥

॥ ಅಷ್ಟತಾಳ ॥

ಜಾತಿವರ್ಣದ ಮಾತದೇಕೆ । ಲೋಕ ।
ನೀತಿಯೆ ಹಿರಿದು ಪರಾಕೆ ॥
ನಾ ತೆರಳುವೆ ಹರಸುವುದು । ಮನ ।
ಭೀತಿ ಬೇಡೆಲೆ ತಾತ ಯಶವೆನಗಹುದು ॥ ೧ ॥

॥ ಭಾಮಿನಿ ॥

ಕೇಳುತದಿರಥ ಯೋಚಿಸಿದನೀ ।
ಬಾಲನೇತರ ಕುಲಜನೋ ಜನ ।
ಪಾಲ ತರಳರು ಗಳಿಪ ವಿದ್ಯೆಯಕಾಂಕ್ಷೆಯಿಹುದಿವಗೇ ॥
ತಾಳದೆಯೆ ಪ್ರವಹಿಸುವ ವಿದ್ಯಾ ।
ಲಾಲಸೆಗೆ ತಡೆಯೊಡ್ಡುವೆನೆ ಶಿವ ।
ಬಾಲನನು ಸಲಹೆನುತ ಮುದ್ದಿಸಿ ಹರಸಿ ಕಳುಹಿದನು ॥ ೧ ॥

॥ ಸೌರಾಷ್ಟ್ರ ತ್ರಿವುಡೆ ॥

ಕರಿಪುರದಿ ಕುಂಭಜನು ವಿದ್ಯಾ । ಪರಿಣತಿಯ ।
ನೀಡುವನುಯೆಂಬುದ ।
ನರಿತು ಬರೆ ಕಂಡಾಗ ಶಬರನ । ಕರೆದು ಕೇಳ್ದ ॥ ೧ ॥

ಯಾರು ನೀನೆಲೆ ವೀರ ಮೊಗದಲಿ ।
ತೋರುತಿಹುದು ನಿರಾಶೆ ಭಾವವ ।
ದಾರ ಕಂದನು ಪೇಳಬಹುದೆ ಉ । ದಾರಮನದಿ ॥ ೨ ॥

ಉತ್ತಮದ ಧನುರ್ವೇದ ಸಾರವ ।
ಚಿತ್ತದಲಿ ಸಂಚೈಸೆ ತೆರಳಿದೆ ।
ಹಸ್ತಿನಗರಿಗೆ ಯೇಕಲವ್ಯನೆ । ನುತ್ತಪೆಸರು ॥ ೩ ॥

ವರ್ಣಕ್ಷಾತ್ರೇಯರಿಗೆ ತಾ ಹೊರ ।
ತನ್ಯರಿಗೆ ಧನುರ್ವೇದಮಂತ್ರದ ।
ವರ್ಣವರುಹುವುದಿಲ್ಲವೆಂದರು । ದ್ರೋಣರೆನಗೆ ॥ ೪ ॥

ಕಲಿವೆ ಸ್ವಾಧ್ಯಾಯನದೊಳಗೆ ನಾ ।
ಲಲಿತಧನುಶರವಿದ್ಯೆ ಯೆನುತಲಿ ।
ದಲಿತಮಾನಸ ಪೊರಡೆ ಕರ್ಣನು । ಕಳವಳದಲಿ ॥ ೫ ॥

॥ ಭಾಮಿನಿ ॥

ಹೀನ ಕುಲಜನು ಯೀತನೆನುತಲಿ ।
ದ್ರೋಣ ತ್ಯಜಿಸಿಹವೆನಗೆ ವಿದ್ಯಾ ।
ದಾಮಗೈವೆನೆ ವರ್ಣಭೇದ ಪಿಶಾಚ ಬಾಧೆಯಿದು ॥
ತಾನು ಕ್ಷತ್ರಿಯರಿಂಗೆ ವಿದ್ಯಾ ।
ದಾನ ಗೈಯದ ಗುರುವನರಸುತ ।
ದೀನತನದಲಿ ಬೇಡಿ ಸೇವಿಸಿ ಪಡೆವೆ ವಿದ್ಯೆಯನು ॥ ೧ ॥

॥ ಕಾಂಬೋಧಿ ಝಂಪೆ ॥

ಉತ್ತರೆಯ ಪೌತ್ರ ಕೇಳಿತ್ತ ಭಾರ್ಗವರಾಯ ।
ಕೃತ್ತಿವಾಸನ ಸುತನ ಶಿಷ್ಯ ॥
ಕ್ಷತ್ರಿಯರ ದೌಷ್ಟ್ಯದಲಿ । ಹೆತ್ತವ್ವೆ ರೇಣುಕೆಗೆ ।
ಒತ್ತರಿಸಿ ಬಹ ದುಃಖ ಕಂಡು ॥ ೧ ॥

ಭರಿತ ರೋಷಾತುರದಿ । ಪರಶುವನು ಕೈಗೊಂಡು ।
ಧರೆಯನಿಪ್ಪತ್ತೊಂದು ಬಾರಿ ॥
ತಿರುಗಿ ಕ್ಷಾತ್ರೇಯರನು । ತರಿದು ತರ್ಪಣವಿತ್ತ ।
ಕುರುಕ್ಷೇತ್ರದಲಿ ತನ್ನ ಪಿತಗೆ ॥ ೨ ॥

ಉರಗನಿಗೆ ಹಾಲೆರೆದ । ತೆರನಹುದು ಧನುರ್ವೇದ ।
ವರುಹಿದರೆ ಕ್ಷತ್ರಿ ಬಾಲರಿಗೆ ॥
ನಿರತವೀ ವ್ರತವೆನಗೆ । ಅರುಹುವೆನು ವಿಪ್ರರಿಗೆ ।
ಹೊರತನ್ಯ ವರ್ಣಿಗರಿಗಿಲ್ಲ ॥ ೩ ॥

ತನಗಿದುವುಪಾಂಶುವ್ರತ । ವೆನುತ ದ್ವಿಜ ವಟುಗಳಿಗೆ ।
ಅನುನಯದಿ ಕಲಿಸಲಾಶ್ರಮಕೆ ॥
ಇನತನುಜ ಬರೆ ಕಂಡು । ಮುನಿತಿಲಕ ವಾತ್ಸಲ್ಯ ।
ವನು ತೋರಿ ಬೆಸಗೊಂಡನವನ ॥ ೪ ॥

॥ **ಕೇದಾರಗೌಳ – ಅಷ್ಟತಾಳ** ॥

ತರಳ ನೀನಾರಯ್ಯ ಬಂದ ಕಾರಣವೇನು ।
ಪುರವೆಲ್ಲಿ ಯಾರ ಕಂದ ॥
ಅರುಹೆಲ್ಲವಿವರವ ನೆನೆ ವಸುಷೇಣನು ।
ಭರಿತ ಸಂತೋಷದಿಂದ ॥ ೧ ॥

ಎರಗಿ ಸಾಷ್ಟಾಂಗದಿ ಮಗುಳೆದ್ದು ನುಡಿದನು ।
ಗುರುದೇವ ನಾನನಾಥ ॥
ಕರೆವರು ವಸುಷೇಣನೆನುತೆನ್ನ ಶರ ವಿದ್ಯೆ ।
ಯರುಹೆನೆ ಭಾರ್ಗವನು ॥ ೨ ॥

॥ **ಭಾಮಿನಿ** ॥

ವೀರಸಿರಿಯುಕ್ಕುತಿಹ ದೇಹಾ ।
ಕಾರವನು ಕಂಡಾಗ ಮನದಿಲಿ ।
ತೋರಿಡುದು ಸಂಶಯವು ಮುನಿಪಗೆ ಕ್ಷಾತ್ರದಂಕುರದ ॥
ವೋರೆಗಣ್ಣೋಟದಲ್ಲಿ ಕೇಳಿದ ।
ನ್ಯಾರು ನೀ ಕ್ಷತ್ರಿಯನೊ ಕಪಟವ ।
ದೋರದಧುಸುರೆನೆ ಭೀತಿ ಭಕ್ತಿಯೊಳೆಂದನಿನ ತನುಜ ॥ ೧ ॥

॥ ತ್ರಿಪುಡೆ ॥

ತೋಯಜಾಪ್ತನೆ ಸಾಕ್ಷಿ ಕ್ಷತ್ರಿಯ ।
ರಾಯರಿಗೆ ಮಗನಲ್ಲ ದಿಟವಿದು ।
ಕಾಯಿ ಮೇಣ್ ಕೊಲ್ಲೆನಲು ಮುನಿಗಳ । ರಾಯನಗುತ ॥ ೧ ॥

ಮನ್ನಿಸಿದ ಕರುಣದಲಿ ತರಳನ ।
ನಿನ್ನೆನಗೆ ನೀ ಪರಮಶಿಷ್ಯನು ।
ಉನ್ನತದ ಬಲುವಿದ್ಯೆಯರುಹುತ । ನಿನ್ನ ಪೊರೆವೆ ॥ ೨ ॥

ರಾಧೆಸುತ ನೀ ತೆರದಿ ಗುರುವನು ।
ಮೋದದಲಿ ಸೇವಿಸುತ ಚಾಪದ ।
ವೇದಮಂತ್ರಾಸ್ತ್ರಗಳನೆಲ್ಲವ । ಸಾಧಿಸಿರಲು ॥ ೩ ॥

ವಿಧಿಯು ಕೈಯಾಡಿಸಿತು ಕರ್ಣನ ।
ಬದುಕಿನಲಿ ಸುರಪತಿಯ ರೂಪದಿ ।
ಬದಲು ಬಗೆದನು ಯೀತ ಪಾರ್ಥನ । ವಧಿಪನೆನುತ ॥ ೪ ॥

ತಾಳಿ ಭ್ರಮರಾಕಾರ ಸುಮನಸ ।
ಪಾಲಕನು ಭೃಗುರಾಮನಾಶ್ರಮ ।
ಪಾಳಯದಿ ಸುಳಿಯುತ್ತ ಕಾದನು । ಕಾಲಕಾಗಿ ॥ ೫ ॥

ಇತ್ತ ಬಹಳಾಯಾಸದಲಿ ಮುನಿ ।
ಪೋತ್ತಮನು ಬಳಿ ಕರೆದು ಕರ್ಣವ ।
ನಿತ್ತ ಬಾರೈ ಪವಡಿಸುವೆ ನಾ । ಸ್ವಸ್ಥದಿಂದ ॥ ೬ ॥

ಅಂಬುಜಾಕ್ಷನು ಯಿಂತು ಮಸ್ತಕ ।
ಕಿಂಬನಾಗಿಸುತಿನಜ ಜಂಘೆಯ ।
ಕುಂಭಿನಿಗೆ ಮೈಚೆಲ್ಲಿದನು ಯೇ । ನೆಂಬೆ ಮುಂದೆ ॥ ೭ ॥

ಗುರುವು ನಿದ್ರಿಸಲಾಗ ಭ್ರಮರವು ।
ಕೊರೆಯೆ ವಸುಷೇಣಕನ ತೊಡೆಯನು ।
ಹರಿದುದೈಕೆನ್ನೀರು ಗುರುವಿದ । ನರಿಯಲಿಲ್ಲ ॥ ೮ ॥

ಅವುಡುಗಚ್ಚುತ ಸಹಿಸಿ ವೇದನೆ ।
ಯವಗಣಿಸೆ ಗುರುನಿದ್ರೆಗೋಸುಗ ।
ಅವಗಡಕೆ ಯೆಚ್ಚತ್ತನಾ ಭಾ । ರ್ಗವನು ತಾನು ॥ ೯ ॥

॥ ಕೇದಾರಗೌಳ – ಅಷ್ಟತಾಳ ॥

ಭೃಗುರಾಮ ಮೈಮುರಿದೆದ್ದನು । ಇಂಥ ।
ಹಗರಣವೇನೆಂದು ಕೇಳ್ದನು ॥
ಉಗುವ ಕಂಬನಿಧಾರೆ ಕಣ್ಣಲಿ । ಮತ್ತೆ ।
ನಗುಮಿಂಚುತಿದೆ ತುಟಿಯಂಚಲಿ ॥ ೧ ॥

॥ ರೂಪಕ ॥

ಗುರುದೇವ ತಾವ್ ನಿದ್ರಾವಶರಾಗೆ ತೊಡೆಯನ್ನು ।
ಕೊರೆಯೆ ಷಟ್ಪದಿಯೊಂದು ಬಂದು ॥
ಗುರುನಿದ್ರಾ ಭಂಗದ ದೋಷಕಿಂತಲು ನೋವು ।
ಹಿರಿದಲ್ಲವೆಂದು ಸೈರಿಸಿದೆ ॥ ೧ ॥

॥ ಭಾಮಿನಿ ॥

ಕರ್ಣಕರ್ಕಶ ಕ್ಷಾತ್ರ ಭುಜಗ ಸು ।
ಪರ್ಣಭಾರ್ಗವಗಾದುದೀ ನುಡಿ ।
ವರ್ಣಕ್ಷತ್ರಿಯಗಲ್ಲದೀತೆರ ಸೈರಣೆಯು ಬಹುದೇ ॥
ಯೆನ್ನ ಕರುಣಾಪಾರವಶ್ಯದಿ ।
ಗನ್ನಗತಕದಿ ಕೆಡೆದ ಕ್ಷತ್ರಿಯ ।
ಕುನ್ನಿ ನೀನಹುದಲ್ಲವೆಂಬುದನೊದರು ದಿಟವಾಗಿ ॥ ೧ ॥

॥ ಸೌರಾಷ್ಟ್ರ – ತ್ರಿವುಡೆ ॥

ಹರಿಣ ಹರಿಯನು ನಿರತ ವಂಚಿಸು ।
ತಿರಲು ಬಹುದೇ ಗಂಪ್ವರದೊಳಾ ।
ಹರನ ವುರಿಗಣ್ಣಾಡಿಕೆಯೆ ಕೇಳ್ । ಗುರುವರೇಣ್ಯಾ ॥ ೧ ॥

ಕುಲದ ನೆಲೆಯನ್ನರಿಯೆ ನಾ ನೃಪ ।
ಕುಲಜನಲ್ಲವು ಸರ್ವಥಾ ತವ ।
ನಳಿನ ಪದ ದಾಣೆಯೆನೆ ಭಾರ್ಗವ । ಮುಳಿದು ನುಡಿದ ॥ ೨ ॥

ಬೇರ ಬಲ್ಲಾತನಿಗೆ ಎಲೆಯನು ।
ತೋರುವೆಯ ಛೀ ದ್ರೋಹಿ ಕ್ಷತ್ರಿಯ ।
ವೀರರಿರವನ್ನರಿತಿರುವೆನಾ । ಭಾರಿ ಹಿಂದೆ ॥ ೩ ॥

ಮುಂದೆ ನಿನ್ನಾಪತ್ತಿನಲಿ ನಾ ।
ನಿಂದು ಕಲಿಸಿರುವಸ್ತ್ರಮಂತ್ರದ ।
ಲೊಂದುಳಿಯದಂದದಲಿ ಮರೆಯಲಿ ।ಯೆಂದು ಶಪಿಸೆ॥ ೪ ॥

॥ ಭಾಮಿನಿ ॥

ಕೇಳಿ ನೆತ್ತಿಯ ಮೇಲೆ ಲೋಹದ ।
ಕೀಲ ಜಡಿದಂತಾಗಿ ಪ್ರಳಯದ ।
ಶೂಲಿಯಂತಿಹ ಭಾರ್ಗವನ ಪದಗಳಲಿ ಶಿರವಿರಿಸಿ ॥
ಗೋಳಿಡುತ ಬೆಸಗೊಂಡ ಶಿಷ್ಯನ ।
ಬೀಳಗೆಡಹೈ ಗುರುವೆ ಕ್ಷಿತಿಯೊಳು ।
ಬಾಳುವೆಯು ಎನಗೇಕೆ ನಿನ್ನವಕೃಪೆಗೆ ಬಲಿಯಾಗಿ ॥ ೧ ॥

ಅಳುವ ಕಂದನ ನಯನವಾರಿಯ ।
ಸೆಳೆತಕೊಚ್ಚೊಯ್ಯಲ್ಕೆ ಕ್ರೋಧವ ।
ನಳಿನ ನೇತ್ರಪ್ರಸನ್ನ ಭಾವದಿ ಶಿಷ್ಯನನು ನೆಗಹಿ ॥
ಬಳಲದಿರು ಮಗು ಮುಂದೆ ಶಲ್ಯನ ।
ಲಲಿತ ಸಾರಥ್ಯದಿ ಮಹಾರಥಿ ।
ಗಳ ಪದವಿ ನಿನಗಹುದು ದಾನದಿ ನಿರತಮನವಿರಿಸು ॥ ೨ ॥

॥ ತ್ರಿವುಡೆ ॥

ಹರಕೆಯನು ಕೈಗೊಂಡು ಹಸ್ತಿನ ।
ಪುರಕೆ ಬರುತಲಿ ಕಂಡ ಕುರುಕುಲ ।
ದರಸುಮಕ್ಕಳ ಶಸ್ತ್ರವಿದ್ಯಾ। ಪರಿಣತಿಯನು ॥ ೧ ॥
ಸಲೆ ಪರೀಕ್ಷಿಪ ಸಭೆಯ ಪೊಗುತಲಿ ।
ಕಲಿ ಧನಂಜಯಗಿದಿರು ನಿಂತಾ ।
ಸಲಿಲಜಾಪ್ತನ ಸುತನು ಪಾರ್ಥನ । ಬಲುಹ ಕೇಳೆ ॥ ೨ ॥
ಕಲಶಸಂಭವ ಕೃಪರು ಕರ್ಣನ ।
ಕುಲವನೆಚ್ಚರಿಸುತ್ತ ಭಂಗಿಸೆ ।
ಖಳಸುಯೋಧನನಂಗದೊಡೆತನ । ಛಲದೊಳಿತ್ತ ॥ ೩ ॥

## ರತ್ನಾವತಿಯ ಪ್ರವೇಶ

### ॥ ಸೌರಾಷ್ಟ್ರ – ತ್ರಿವುಡೆ ॥

ಮೀನಚಾಪಲನೇತ್ರೆ ಮದನನ ।
ಆನೆ ರತ್ನಾವತಿಯು ಬಂದಳು ।
ಆ ನಗರದರಗುವರಿ ಸಖಿಯರ । ತಾನು ಕರೆದು ॥ ೧ ॥

### ॥ ಅಠಾಣ – ರೂಪಕ ॥

ಪ್ರಮದೆಯರೇ ಬನ್ನಿ ಸುಮದ ವನಕೆ ಪೋಗುವ ।
ಘಮಿಘಮಿಸುವ ಜಾಜಿ ಮಲ್ಲೆ ಸುಮವ ಕೊಯ್ಯುವ ॥
ಪ್ರಮದವನದ ಕೊಳದಿ ಸಲಿಲ ಕ್ರೀಡೆಯಾಡುವ ।
ಸುಮವ ಪೋಣಿಸುತಲಿ ಮುಡಿದು ಹೆರಳ ತುಂಬುವ ॥ ೧ ॥

### ॥ ಕಾಂಬೋಧಿ – ಝಂಪೆ ॥

ಕೇಳು ಜನಮೇಜಯನೆ । ಸೂತಪಾಲಿಪನೋರ್ವ ।
ಕಾಲಗತಿಯಲಿ ಜನಪನಾಗಿ ॥
ಪಾಲಿಸಿದ ಗುರುವಚನ । ವಿಪ್ರರಿಗೆ ದಿನನಿತ್ಯ ।
ಕೇಳಿದುದನಿತ್ತು ದಾನದಲಿ ॥ ೧ ॥
ಸಕಲಸೈನ್ಯವ ನೆರಹಿ । ಚರಿಸಿ ಭೂಮಂಡಲವ ।
ನಖಿಲ ಭೂಪರ ದರ್ಪವಿಳಿಸಿ ॥
ಸಕಲಸಂಪದಗಳನು ಸಂಚಯಿಸಿ ಸೈನಿಕದ ।
ನಿಕರಸಹ ಹಿಂದಿರುಗಿ ಬರುತ ॥ ೨ ॥
ಲಲಿತೋದ್ಯಾನವ ಕಂಡು । ಭೃತ್ಯವರ್ಗಕೆ ಪೇಳ್ದ ।
ಚೆಲುವನದಿ ವಿಶ್ರಮಿಸಿರೆನುತ ॥
ಬಳಿಕ ತರುಮೂಲದಲಿ । ಪವಡಿಸಿದ ಕಾಯದಾ ।
ಬಳಲಿಕೆಯೊಳಾಗ. ಕಲಿಕರ್ಣ ॥ ೩ ॥

**॥ ವಾರ್ಧಿಕ ॥**

ಇಂದುವದನೆಯರಿಂತು ಸುಮವನದಿ ಚರಿಸುತಿರೆ ।
ಕುಂದರದನೆಯು ವನದ ಸಿರಿಯೆರೆಯ ಋತುರಾಜ ।
ನಂದದಲಿ ಪವಡಿಸಿದ ಇನತನೂಜನ ಕಂಡು ।
ಮೋಹಪುಳಕಿತಳಾಗುತ ॥
ಅಂದುಗೆಯ ಧ್ವನಿಗೆಯ್ಕೆ ಕರ್ಣನೆಚ್ಚತ್ತಾಗ ।
ಲಿಂದೀವರಾಕ್ಷಿಯಳ ಚೆಲುಮೊಗದ ಕಿರುನಗೆಯ ।
ಅಂದಕಾಕರ್ಷಿತನು ತಾನಾಗಿ ನುಡಿಸಿದನು ।
ಹರ ವೈರಿಯರಗಿಣಿಯನು ॥ ೧ ॥

**॥ ಮೋಹನ – ಅಷ್ಟತಾಳ ॥**

ಕಲಹಂಸಗಮನೆ ಭ್ರಮರಗುರುಳೆ ನಿನ್ನ ।
ಚೆಲುವಾನನಕೆ ಸಾಟಿ ಶಶಿಯ ಕಲೆ ॥
ತಿಳಿವಾಸೆಯಂಕುರಿಸಿತು ಮನದಿ ಯಾವ ।
ನೆಲನಧಿಪನ ಸುತೆ ಪೇಳ್ವವದಿ ॥ ೧ ॥

**॥ ಸೌರಾಷ್ಟ್ರ – ತ್ರಿವುಡೆ ॥**

ಪತ್ತನವು ಯಿದು ರತ್ನಪುರವೀ ।
ಪೃಥ್ವಿಪಾಲಕ ರತ್ನಶೇಖರ ।
ನರ್ತಿಯರ್ಭಕೆ ರತ್ನವತಿ ನಾ । ನಿತ್ಯಸುಖಿಯು ॥ ೧ ॥

**॥ ಜಂಜೂಟಿ – ರೂಪಕ ॥**

ಅಂಗದೇಶದಧಿಪನಾನ । ನಂಗ ಶರದಲೀ ॥
ಹಿಂಗಿಕೊಂಡೆ ಸತ್ವವೀಗ ಕೇಳಿ ಸವಿಯುಲಿ ॥
ಅಂಗ ಚೆಲುವಿಲಾಸ ರಸದೊಳಾಳ್ದೆ ನಿನ್ನನು ।
ಸಿಂಗಮಣಿಯ ವಾಮಭಾಗಕಿರಿಸಿಕೊಂಬೆನು ॥ ೧ ॥

॥ ಮಧ್ಯಮಾವತಿ – ತ್ರಿವುಡೆ ॥

ಮಾರ ಸುಂದರ ನಿನ್ನ ವರಿಸದ ।
ನಾರಿತನವೇಕೆನಗೆ ವೊಪ್ಪಿದೆ ।
ಸಾರು ನೀ ಕನ್ಯಾರ್ಥಿಯಾಗಿಯೆ । ವೀರ ಮಮಪಿತನಲ್ಲಿಗೆ ॥ ೧ ॥

॥ ಭಾಮಿನಿ ॥

ಇನಿತುಸುರಿ ನಸುನಾಚಿ ನಗುತಲಿ ।
ವನಿತೆ ತೆರಳಿದ ಪಥವ ಬೆಂಬಿಡಿ ।
ದಿನತನೂಜನ ಹೃದಯ ಸಾಗಿತು । ತರುಣಿ ವಶವಾಗಿ ॥
ಮನವ ಸಾವರಿಸಿದನು ಬಳಿಕವ ।
ಜನಪನನುಮೋದನೆಯೊಳಾತನ ।
ತನುಜೆಯನು ವಿಧ್ಯುಕ್ತದಿಂ ವರಿಸಿದನು ಸಂತಸದಿ ॥ ೧ ॥

* * *

॥ ಭಾಮಿನಿ ॥

ಜನಪ ಕೇಳಾ ಬಳಿಕ ಕೌರವ ।
ಜನಪ ಪಾಂಡವರೊಳಗೆ ದ್ವೇಷದ ।
ಅನಲವುರಿದುದು ಕಪಟದ್ಯೂತದಿ ಪಾಂಡುನಂದನರ ॥
ವನಕೆ ದ್ವಾದಶ ವರ್ಷವಟ್ಟಿದ ।
ಜನಪದಕೆ ಅಜ್ಞಾತವಾಗಿಯೆ ।
ದಿನವ ದೂಡಿದರೊಂದು ವತ್ಸರ ಬಳಿಕ ಶ್ರೀಹರಿಯ ॥ ೧ ॥
ಕಳುಹಿರಲು ಸಂಧಾನಕಾಗಿಯೆ ।
ನಳಿನನಾಭನು ನುಡಿದ ನೀ ಬಿಡು ।
ನೆಲವ ಪಾಂಡುಕುಮಾರರಿಗೆ ತಾನ್ಯೆದು ಗ್ರಾಮಗಳ ॥
ಕೊಲಿಸಲಾರೆನು ನಿನ್ನನೆನೆ ಕುರು ।
ಕುಲಲಲಾಮನು ಪೇಳ್ದನೆಂದಿಗು ।
ನೆಲನಬಿಡೆ ನಿನ್ನಂಘ್ರಿಯೊಳು ನಾ ಹರಣವರ್ಪಿಸುವೆ ॥ ೨ ॥

॥ ಸೌರಾಷ್ಟ್ರ ತ್ರಿವುಡೆ ॥

ಅಂಧ ನೃಪನರ್ಭಕನ ನುಡಿಗರ ।
ವಿಂದಲೋಚನ ಮರುಗಿ ಸುರನದಿ ।
ನಂದನಾದಿಗಳುಳಿಯುತೇರಿದ । ನಂದಣವನು ॥ ೧ ॥
ಪರಮಮುನಿನಿಕರವನು ಕಳುಹಿಸಿ ।
ಕರೆದು ರವಿಜನನಬ್ಜನಾಭನು ।
ಕಿರಿದು ದೂರಕೆ ಕಳುಹಿ ಕೊಡುಯೆಂ । ದೊರೆದನಾಗ ॥ ೨ ॥

॥ ಸೌರಾಷ್ಟ್ರ – ತ್ರಿವುಡೆ ॥

ಹರಿಯ ರಥಕುರೆ ಕರವನಾನಿಸಿ ।
ಬರುವರದಿ ಜನ ಕಂಡು ಮುರಹರ ।
ಕುರುನೃಪಾಲಗೆ ಭೇದವೆಣಿಸುತ । ಲೊರೆದನವಗೆ ॥ ೧ ॥

॥ ಕಾಂಬೋಧಿ – ಝಂಪೆ ॥

ಬಾರಯ್ಯ ತರಣಿಜನೆ ನೀನೆನಗೆ ಮೈದುನನು ।
ಯೇರು ಮಣಿರಥವ ನಿನ್ನೊಡನೆ ॥
ಕಾರಿಯಗಳುಂಟು ತೊಡೆ ಸೋಂಕಿನಲಿ ಕುಳ್ಳಿರೆನೆ ।
ವಾರಿಜಾಕ್ಷನೊಳಿನಜನುಡಿದ ॥ ೧ ॥
ದಾನವಾಂತಕ ನಿನ್ನೊಳೆನಗೆ ಸಮಸೇವನೆಯೆ ।
ನೀನೆತ್ತ ನಾನೆತ್ತರವನು ॥
ಮಾನವೋದ್ಧರಣ ಕರ್ತಾರ ಚಿನ್ಮಯಮೂರ್ತಿ ।
ಕ್ಷೋಣಿಯಲಿ ಕುಲಹೀನ ನಾನು ॥ ೨ ॥
ತಿಳಿಗೇಡಿಗಳ ನುಡಿಗೆ ಮೌಲ್ಯವಿಲ್ಲಲೆ ಕರ್ಣ ।
ಇಳೆಯಧಿಪ ನಿನ್ನ ನೀನರಿಯೆ ॥
ನಳಿನಾಪ್ತಕುಲಜ ಶ್ರೀರಾಮಗೆಣೆ ನೀನೆನಲು ।
ಕಳವಳದಿ ಕೇಳ್ದನವನೊಡನೆ ॥ ೩ ॥

॥ ಕಾಂಬೋಧಿ – ಝಂಪೆ ॥

ಕೌಸಲ್ಯೆಗರ್ಭಸಾಗರ ಶಶಿಯ ಹೋಲುವೆಗೆ ।
ಯೀಸಕಲ ಜಗದೊಳಿಹರ್ಯಾರು ॥
ನಾ ಸೂತಸುತನಿಹೆನು ವೊಗಟಿನರ್ಥವದೇನು ।
ವಾಸುದೇವನೆ ಶಂಕೆನೀಗು ॥ ೪ ॥

॥ ಕುಂಭ ಕಾಂಬೋಧಿ – ಅಷ್ಟತಾಳ ॥

ಮುನಿಪ ದೂರ್ವಾಸ ಮಂತ್ರದಲಿ । ಕುಂತಿ ।
ನಿನಗೆ ಜನ್ಮವನಿತ್ತಳಿನ ಕರುಣೆಯಲಿ ॥
ಎಣಿಸಲು ಜೇಷ್ಠ ಪಾಂಡವನು । ನಿನಗೆ ।
ಜನಪ ಕೌರವ ಸೇವೆ ಸೊಗಸಪ್ಪುದೇನು ॥ ೧ ॥

ಸರಿಯಾರು ನಿನಗೆ ಕ್ಷೋಣಿಯಲಿ । ವೈರ ।
ಸರಿಯಲ್ಲ ಸೇರಿಕೋ ಸಹಜಾತರಲ್ಲಿ ॥
ಕರಿಪುರ ದೊರೆತನ ನಿನಗೆ । ಸೇವೆ ।
ವಿರಚಿಪರಿತ್ತಂಡವೊಂದಾಗಿ ಕಡೆಗೆ ॥ ೨ ॥

॥ ವಾರ್ಧಿಕ ॥

ಕೊರಳ ಸೆರೆ ಹಿಗ್ಗಿದವು ಹರಿಯೆ ಕಂಬನಿಧಾರೆ ।
ಕುರುಪತಿಗೆ ಕೇಡಾದುದಕಟೆಂದು ಮರುಗಿದನು ।
ಧುರದಿ ಕೊಲುವಡೆ ಪಾಂಡು ಸುತರೆನಗೆ ಸೋದರರು ।
ಕಾದೆನಾದರೆ ಮುಂದಕೆ ॥
ಧರಣಿಯಲಿ ಕೌರವಗೆ ನೆಲೆಯಿಲ್ಲ ಭೇದದಲಿ ।
ಯಿರಿದ ವಂಶದ ಗುಟ್ಟನರುಹಿ ಮಧುಸೂದನನು ।
ಹರಹರಾಯೆನುತ ಗೋವಿಂದಗೆಂದನು ತನ್ನ ।
ದೃಢಮನದ ನಿಶ್ಚಯವನು ॥ ೧ ॥

॥ ಸೌರಾಷ್ಟ್ರ – ತ್ರಿವುಡೆ ॥

ದೇವಕೀಸುತ ನಿನ್ನ ತಂತ್ರದ ।
ಭಾವವರಿತೆನು ಪುಹಿಯು ಸಿರಿಗಳಿ ।
ದಾವ ಶಾಶ್ವತ ಕೌರವೇಂದ್ರಗೆ । ಸಾವತಹೆನೆ ॥ ೧ ॥

ಪೊರೆದ ದಾತಾರನಿಗೆ ಹಗೆಯರ ।
ಶಿರವನರಿದೊಪ್ಪಿಸುವೆ ರಣದಲಿ ।
ಮುರಮಥನ ತವ ವೀರರೈವರ । ಸಿರಿಯೆ ನಂಬು ॥ ೨ ॥

॥ ಸೌರಾಷ್ಟ್ರ ತ್ರಿವುಡೆ ॥

ಈ ತೆರದಿ ಬೀಳ್ಕೊಟ್ಟನಾ ಶ್ರೀ ।
ನಾಥನನು ಬಂದರಮನೆಗೆ ಕುರು ।
ನಾಥಗೊದಗಿತು ಕೇಡಕಟಯೆನು । ತಾತ ವ್ಯಥಿಸಿ ॥ ೧ ॥

* * *

ಒಂದು ದಿನ ರವಿಜಾತ ಶ್ರೀಹರಿ ।
ನಂದಿನೀ ಸಲಿಲದಲಿ ಮೀಯುತ ।
ತಂದೆಗರ್ಘ್ಯವ ನೀಯುತಿರೆ ಗೋ । ವಿಂದ ಮತದಿ ॥ ೨ ॥

ವೀರ ಪಾಂಡವರವ್ವೆ ಗಂಗಾ ।
ತೀರದೆಡೆ ಗೈತಂದು ಕಂಡಾ ।
ಬಾರೆನುತ ಕರೆಯಲ್ಕೆ ಪುಳಕದ । ಭಾರದಿಂದ ॥ ೩ ॥

॥ ಭಾಮಿನಿ ॥

ಕಂಡನಾ ರವಿ ಸೂನು ಮಾತೆಯ ।
ದಿಂಡುಗೆಡೆದುರೆ ಚರಣಕಮಲದಿ ।
ಮಂಡೆಯಾನಿಸೆ ನೆಗಹಿ ಕಂದನನಪ್ಪಿದಳು ಭರದಿ ।
ಕಂಡೆಯೇನೌ ತಾಯೆ ಸಮರ ಪ್ರ।
ಚಂಡ ಕರ್ಣನು ತಾಯ ಮಮತೆಯ ।
ನುಂಡನಿಂದಿಗೆ ಧನ್ಯನಾದೆನು ಬಂದಹದನೇನು ॥ ೧ ॥

॥ ಕೇದಾರಗೌಳ – ಝಂಪೆ ॥

ಹಡೆದು ನಿಷ್ಕರುಣೆಯಿಂದ । ನಿನ್ನನುರೆ ।
ಕೆಡೆದೆ ಗಂಗೆಯೊಳು ಕಂದ ॥
ಪೊಡಲುರಿಯ ತಣಿಸೆ ನೀನು । ಪ್ರೇಮದಲಿ ।
ಪೊಡಗೂಡು ಸಹಜರನ್ನು ॥ ೧ ॥

ತಾಯೆ ನೀ ತೊರೆದರೇನು । ಕುರುಕುಲದ ।
ರಾಯ ಸಲಹಿದನೆನ್ನನು ॥
ರಾಯತನದೊಸಗೆ ಯೇಕೆ । ನೆಚ್ಚಿದನ ।
ಸಾಯಗೊಡೆ ನಮ್ಮ ಜೋಕೆ ॥ ೨ ॥

ನಡೆದಿಕೊಡು ನುಡಿಯನೊಂದ । ತೊಟ್ಟಂಬ ।
ತೊಡಬೇಡ ರಣದಿ ಕಂದ ॥
ಹಡೆದೊಡಲ ಹರಕೆಯಿದನು । ಸಲಿಸುಳಿಸು ।
ವೊಡಹುಟ್ಟಿದವರ ನೀನು ॥ ೩ ॥

ಚಿತ್ತದಲಿ ದೃಢತೆವೆರಸಿ । ಕೈತಟ್ಟು ।
ತಿತ್ತ ಭಾಷೆಯನು ಸಹಸಿ ॥
ನಿತ್ತಿರಲು ಬೇಡ ತಾಯೆ । ತೆರಳೀಗ ।
ಚಿತ್ತ ಕಲಕುವುದು ಮಾಯೆ ॥ ೪ ॥

(ಕುಂತಿ ಕರ್ಣರ ನಿರ್ಗಮನ)

**॥ ಭಾಮಿನಿ ಅರ್ಧ ॥ (ಕರ್ಣಪರ್ವ)**

ಶಿವಶಿವಾ ತಾರಕನ ಗುಹನಾ ।
ಹವವೊ ಮೇಣ್ ರಾವಣನ ರಾಮನ ।
ಬವರವೋ ಪೊಸತಾಯ್ತು ಕರ್ಣಾರ್ಜುನರ ಸಂಗ್ರಾಮ ॥ ೧ ॥

**॥ ಭೈರವಿ – ಏಕ ॥**

ಎಲವೋ ಸೂತ ಕುಮಾರಾ । ಕೊಳು ।
ಗುಳದಲಿ ಸಾಹಸ ತೋರಾ ॥
ಸಲಿಸುವೆ ಭಾಷೆಯನಿಂದು । ತವ ।
ತಲೆಯನುವುಳುಹಿಕೊ ಮುಂದು ॥ ೧ ॥

ಕೈತವದಲಿ ಸೈಂಧವನ । ಸಲೆ ।
ಘಾತಿಸಿ ತರಿದಿಹ ಹದನ ॥
ಯೇತರ ಕಡುಗಲಿ ತನವೋ । ಯೀ ।
ಭೂತಳ ದೂಷಿಪುದೆಲವೊ ॥ ೨ ॥

ಸಾಯಕದಂತರ್ಯಾಮವನು । ರಾ ।
ಧೇಯನು ಬಲ್ಲವನೇನು ॥
ವಾಯುಜ ಖೇಚರರೊಡನೆ । ನೀ ।
ಸಾಯದುಳಿದೆ ತಿಳಿಯದನೆ ॥ ೩ ॥

ಸಾರಥಿಮತದಂದದಲೀ । ಕೃಪೆ ।
ದೋರಿದೆ ಯಮಜಾತನಲಿ ॥
ಹಾರುವುದೇತಕೆ ನರನೇ । ಬಲ ।
ತೋರಲು ಬಾ ಪಾಮರನೆ ॥ ೪ ॥

॥ ಭಾಮಿನಿ ॥

ಬರಸೆಳೆದು ಚಾಪದಲಿ ಪಾರ್ಥನು ।
ಶರವ ಸಂಧಿಸಿ ಬಿಡಲು ಯೋಜನ ।
ವರೆಗೆ ತಿರ್‍ರನೆ ತಿರುಗಿ ತೊಲಗಿತು ಭಾನುಸುತನ ರಥ ॥
ಭರದಿ ರಥವನು ಸಂತವಿಸುತಲಿ ।
ಧರಿಸಿ ದಿವ್ಯಾಸ್ತ್ರವನು ತರಣಿಜ ।
ನರನ ರಥಕಿಡೆ ಹತ್ತು ಬಿಲ್ಲಂತರಕೆ ಸರಿದೋಯ್ತು ॥ ೧ ॥

ಅರರೆ ಭಳಿರೆ ಶಭಾಸು ಕರ್ಣನೆ ।
ಧುರದಿ ಜಗದ್ವಿಖ್ಯಾತ ನೀನೀ ।
ಧರಣಿಯೊಳಗೆ ಮಹಾರಥಿಯು ಧಣು ಧಣುರೆ ಭಾಪೆನುತ ॥
ಸರಸಿಜಾಕ್ಷನು ಪೊಗಳೆ ಕಾಣುತ ।
ನರನು ಚಿಂತಾಭಾರದಿಂದಲಿ ।
ಶಿರವ ತಗ್ಗಿಸಿ ಧನುವಿಳುಹೆ ವಸುದೇವಸುತನೆಂದ ॥ ೨ ॥

॥ ಕಾನಡ – ರೂಪಕ ॥

ಧನುವನಿಳುಹಿದೇಕೆ ಪಾರ್ಥ । ಚಿಂತೆ ಮನಸಿಗೇನು ॥
ನಿನಗೆ ಮಾನಹಾನಿ ಯಾರಿಂ । ದಾಯ್ತು ದುಗುಡವೇನು ॥ ೧ ॥

ರಣದೊಳೆಮ್ಮಂಥವರಿಗಾದರು । ಶೌರ್ಯವೇರಿ ಬಹುದು ॥
ಜನಪರಿಂಗಪಮಾನವಲ್ಲವೆ । ಧುರನಿರುತ್ಸಹ ತಳೆವುದು ॥ ೨ ॥

ನೋಡು ಮುಂದೆ ಧೂರ್ತಕರ್ಣ । ಮಲೆತು ನಿಂತಿಹ ಪರಿಯನು ॥
ಹೂಡು ತೆಗೆ ದಿವ್ಯಾಸ್ತ್ರವೆಂದೆನೆ । ದಾನವಾಂತಕಗೆಂದನು ॥ ೩ ॥

॥ ಮೋಹನ – ಅಷ್ಟ ॥

ದೇವಲಾಲಿಪುದೀಗಲೊಂದು ಯೋಜನ ದೂರ ।
ನಾ ವಿರೋಧಿಯ ರಥವ ॥
ನೀವೆ ನೋಡಿದಿರಲ್ಲ ತೆಗೆದೆಚ್ಚೆ ರಿಪುವನು ।
ಯೀವಿಧ ಪೊಗಳದಿರಿ ॥ ೧ ॥
ಹರಣ ಹಂಗನು ತೊರೆದ್ಹತ್ತು ಬಿಲ್ಲಂತರ ।
ವರೆಗೆಚ್ಚ ರಾಧೇಯನು ॥
ಹಿರಿತನವೇನು ಕರ್ಣಗೆ ಮತ್ತೆ ಕುಂದಿನ ।
ಯಿರವೆನ್ನೊಳೆಲ್ಲ ಕಂಡೆ ॥ ೨ ॥

॥ ವಾರ್ಧಿಕ ॥

ನರನ ನುಡಿ ಕೇಳಿ ನಸುನಗುತೆಂದ ಮುರಹರಂ ।
ಮರುಳೆಲಾ ಪಾರ್ಥ ನಿನಗೇನೆಂಬೆ ಪರಿಕಿಸಲು ।
ಧರಿಸಿರುವೆ ಬ್ರಹ್ಮಾಂಡ ನಾ ಸಹಿತ, ದಿವ್ಯರಥ
ಸಹಿತ ಗಾಂಢೀವ ಸಹಿತ ॥
ವರಹನುಮ ಸಹಿತ ನೀ ಸಹಿತೆಮ್ಮ ಅಂದಣವ ।
ಅರೆ ಅಂಗುಲಕೆ ಚಲಿಸುವಂತೆಸಗಿಹರೆ ಸಾಕು ।
ಹಿರಿದೆ ನೀನವನ ಹುಲು ರಥವನೆಚ್ಚುವು
ದೆನಲು ನರ ಮಗುಳೆ ಧನುವೆತ್ತಿದ ॥ ೧ ॥

॥ ಕೇದಾರಗೌಳ – ಝಂಪೆ ॥

ಧುರಭಯಂಕರವಾದುದು । ಕರ್ಣಾರ್ಜುನ ।
ನರ ಸಮರ ಕಳೆಯೇರ್ದುದು ॥
ಪರಿಪರಿಯ ಮಂತ್ರಾಸ್ತ್ರದ । ಮೇಲಾಟ ।
ಸುರಗಡಣ ನೋಡೆ ನಭದಿ ॥ ೧ ॥

(ಯುದ್ಧ ಮಂತ್ರಾಸ್ತ್ರಗಳ ಪ್ರಯೋಗ)

॥ ಭಾಮಿನಿ ॥

ಅಂಧನೃಪ ಕೇಳ್ ಮಂತ್ರಶರಗಳು ।
ವೊಂದನೊಂದಿಕ್ಕಡಿಸುತಿರೆ ಸುರ ।
ವೃಂದ ಬೆರಗಾಯ್ತವರ ದಿವ್ಯಾಸ್ತ್ರಳ ಹೂಡಿಕೆಗೆ ॥
ಮುಂದೆ ಕೇಳ್ ಜಂಭಾರಿ ಸುತನಿಗೆ ।
ಬಂದ ಹರಿಬವರವಿಜ ಮೂಡಿಗೆ ।
ಯಿಂದ ಭುಜಗಾಸ್ತ್ರವನು ಕೈಗೊಂಡಿರಲು ಕೋಪದಲಿ ॥ ೧ ॥

॥ ಮಾರವಿ – ಏಕ ॥

ಗಗನಾಂಗನೆ ವಲ್ಲಭನೊಲು ಫಣಿಶರ ।
ಝುಗಝುಗಿಸುತ ಹೊಳೆಯೆ ॥
ವುಗಿಯುವ ಗರಳದ ಜ್ವಾಲೆಗೆ ಗಗನದ
ಖಗಸಂತತಿಯಳಿಯೆ ॥ ೧ ॥

ಆಡಂಬರದಲಿ ವುರಗಾಸ್ತ್ರದ ಗುರಿ ।
ನೋಡಿ ನರನ 'ಗಳಕೆ' ॥
ಹೂಡುತ ಮಾದ್ರಾಧಿಪನಲಿಯರ್ಕಜ ।
ನಾಡಿದನಗ್ಗಳಿಕೆ ॥ ೨ ॥

॥ ಭಾಮಿನಿ ॥

ಏನು ಸಾರಥಿ ತರಳು ಪಾಂಡವ ।
ಸೇನೆಯನು ಗೆಲಬಹುದೆ ಪಾರ್ಥನ ।
ಮಾನಿನಿಗೆ ವೈಧವ್ಯ ದೀಕ್ಷಾವಿಧಿಯ ಕೊಡಬಹುದೆ ॥
ಆನಲಮ್ಮುವರುಂಟೆ ನಿನಗಿದು ।
ಸಾನುರಾಗವೆ ಹೇಳೆನಲು ರವಿ ।
ಸೂನುವಿನ ರೌದ್ರಾಸ್ತ್ರವನು ಕಂಡೆಂದ ಮಾದ್ರೇಶ ॥ ೧ ॥

॥ ಹರಿಕಾಂಬೋಧಿ – ಅಷ್ಟತಾಳ ॥

ಆಯಿತೊಳ್ಳಿತು ಸರಳಿದರಿಂದ ಧರಣಿ ನಿ ।
ರ್ದಯದಿ ಕುರುಪತಿಗೆ ॥
ಸಾಯಕಸಂಧಾನವೊಡಬಿಡದೆನಗೆ ರಾ ।
ಧೇಯ ಬೇರಿಹುದು ನೆಲೆ ॥ ೧ ॥

ಗಳಕೊಡ್ಡಿದರೆ ಮಕುಟವ ತೆಗೆವುದು ಶರ ।
ನಳಿನಾಕ್ಷ ಚಮತ್ಕೃತಿಗೆ ॥
ಯಿಳುಹು ಗುರಿಯನುರಕಾಗೀಗ ಪಾರ್ಥನ ।
ತಲೆಗೊಂಬುದಿದು ನಿಶ್ಚಯ ॥ ೨ ॥

॥ ಭಾಮಿನಿ ॥

ಒಂದು ಶರಸಂಧಾನ ನಾಲಗೆ ।
ಯೊಂದು ನಮ್ಮಲಿ ಕುಟಿಲ ವಿದ್ಯವ ।
ನೆಂದು ಕಂಡ್ಯೆ ಶಲ್ಯ ನಾವಡಿಯಿಡುವ ಧರ್ಮದಲಿ ॥
ಯಿಂದು ಹೂಡಿದ ಶರವನಿಳುಹುವು ।
ದಂದವೇ ನೀನರಿಯೆ ಹೊರ ಸಾ ।
ರೆಂದು ತಿರುವಿನೊಳಂಬ ನೊಗೆದನು ಕರ್ಣ ಕನಲುತಲಿ ॥ ೧ ॥

॥ ಆರ್ಯಸವ್ಯಾ – ಏಕ ॥

ಹರಿಯಂಗುಲಿಯಿಂದೊತ್ತಲು ರಥ ನರ ।
ಶಿರವುಳಿಯಲು ಕಂಡಾ ಶರವು ॥
ಗುರಿ ತಪ್ಪಿದ ದ್ವೇಷದಿ ಬರುತಲಿ ಪೂ ।
ತ್ಕರಿಸುತಲೆಂದಿತು ರವಿಜನೊಳು ॥ ೧ ॥

॥ ಅಷ್ಟತಾಳ ॥

ಮೋಸವಾಯಿತು ರಾಧೇಯನೆ ಗುರಿ ತಪ್ಪಿ ।
ವಾಸವಾತ್ಮಜ ಶಿರವುಳಿಯಿತಿನ್ನೇನೆಂಬೆ ॥
ಬೀಸ್ಯೊಗೆ ಮತ್ತೊಮ್ಮೆ ಪಾರ್ಥನ ಶಿರವನ್ನು ।
ಘಾಸಿಗೊಳಿಪೆನೆನಲು ॥ ೧ ॥

॥ ಸೌರಾಷ್ಟ್ರ – ತ್ರಿವುಡೆ ॥

ನೋಡಿ ಬೆರಗಿನೊಳೆಂದ ಶಿವ ಶಿವ ।
ರೂಢಿಗತಿಶಯವೆಲವೊ ವಿಶಿಖವೆ ।
ಬೇಡುವೆಯ ಮರು ಬೆಸನ ನರಹಗೆ । ಗೂಢವೇನು ॥ ೧ ॥
ಉರಗಪತಿ ತಾನಶ್ವಸೇನನು ।

ಸುರಪತಿಯ ಖಾಂಡವದೊಳಿಹೆನದ ।
ಪುರುಹುವಂದಿನೊಳೆನ್ನ ನರೆತರಿ । ದಿರುವ ಪಾರ್ಥ ॥ ೨ ॥

ಮೊಂಡು ಸರ್ಪವೆ ಪರಸಹಾಯವ ।
ಗೊಂಡು ವೈರಿಯ ಗೆಲುವೆನೇ ಮಮ ।
ಗಂಡು ತನಕಿದು ಹೊರತು ಎನೆ ಖತಿ । ಗೊಂಡ ಶಲ್ಯ ॥ ೩ ॥

ತೊಡು ತೊಡೆಲವೋ ಶರವುರಿಪುವನು ।
ಕಡಿವೆನೆಂದೊದರುತಿದೆ ಹಸ್ತಿನ ।
ಪೊಡವಿ ಶಾಶ್ವತಗೊಳಿಸು ಕೌರವ । ಗೊಡನೆ ನೀನು ॥ ೪ ॥

॥ ಮಾರವಿ – ಏಕ ॥

ಬಿಡು ಬಿಡು ಮಾದ್ರಾಧೀಶನೆ ಜಿಹ್ವೆಯ ।
ನುಡಿಗೆರಡಿಹುದೇನೋ ॥
ತೊಡೆನೆನ್ನುತ ನೂಕಲು ಸರ್ಪಾಸ್ತ್ರವ ।
ಕಡುನೊಂದನು ಶಲ್ಯ ॥ ೧ ॥

॥ ಭಾಮಿನಿ ॥

ಎಲೆ ಕೃತಘ್ನನೆ ನಿನ್ನ ಕರೆಸುತ ।
ಕುಲಜನನು ಮಾಡಿಸಿದ ಕುರುಪತಿ ।
ನೆಲಹೊರದು ವಿಶ್ವಾಸಘಾತಕಿ । ಛಲವದೇಕೋ ॥ ೧ ॥

ಹಲವು ನುಡಿಗಳದೇಕೆ ನದಿಜನು ।
ಹುಲುಶಿಖಂಡಿಯ ನೆವದೊಳೊರಗಿದ ।
ಕಲಶಸಂಭವ ಸುತ ನಿಮಿತ್ತದಿ ತನುವ ಬಿಸುಟಿಹನು ॥
ಅಲಗು ಮರುಬೆಸನನ್ನು ಬೇಡಲು ।
ಛಲದಿ ತ್ಯಜಿಸಿದೆಯಕಟ ಕುರುಕುಲ ।
ತಿಲಕ ಮೂವರ ನಂಬಿ ಕೆಟ್ಟಿಹನೆನಗೆ ಹಂಗೇನು ॥ ೨ ॥

(ರಥವಿಳಿದು ಶಲ್ಯ ಹೋಗುತ್ತಾನೆ)

॥ ಪೂರ್ವಿ – ಮಟ್ಟೆತಾಳ ॥

ಜರೆದು ಬೋವನಿಳಿದು ಪೋಗೆ ತನ್ನ ರಥವನು ।
ಯಿರದೆ ತಾನೆ ನಡೆಸಿ ಶರದ ವರ್ಷಗರೆದನು ।
ಶರಕೆ ಶರವ ನೆರಸು ಬಿಡಲು ಕರ್ಣ ರಥವದು ।
ಧುರದ ರುಧಿರ ಕೆಸರ ಕಳದಿ ಹೂತು ಹೋದುದು ॥ ೧ ॥

॥ ಭಾಮಿನಿ ॥

ಹಾನಿದೋರಿತು ನೋಡು ದೊರೆ ನಿ ।
ನ್ನಾನೆ ಕುಸಿದುದು ನೀನು ದೈವ ವಿ ।
ಹೀನ ಹರ ಬಲುಹಿಲ್ಲವನು ಪಾಂಡವರ ಪಕ್ಷವಲ ॥
ಶ್ರೀನಿವಾಸನು ನರಗೆ ಸೂತನು ।
ಮೇಣು ನಿನಗಿಲ್ಲವನು ದಿವಿಜರು ।
ಸ್ಥಾನದಲಿ ಪಿತರಲ್ತೆ ಪಗೆಗಳಿಗಿನ್ನು ನಿನಗಾರು ॥ ೧ ॥

॥ ಏಕತಾಳ ॥

ಕೇಳಯ್ಯ ಪಾರ್ಥ ನೀನೊಲಿದೆನ್ನ ಮಾತ ।
ತಾಳರೆಕ್ಷಣ ಸೋಮಕುಲ ಸುಪ್ರಜಾತ ॥
ಹೂಳಿತು ಮಮ ರಥ ಧುರ ಧಾರುಣಿಯಲಿ ।
ತೋಳಬಲದೊಳೆತ್ತಿ ಹೋರ್ವೆ ನಿನ್ನಲ್ಲಿ ॥ ೧ ॥
ಸರಿಯಾಗಿ ನೋಡೆನ್ನ ದುರ್ದೈವಗಳನು ।
ಧುರಧೀರ ನೃಪ ನೀತಿಯರಿತವ ನೀನು ॥
ವರ ಧನು ಶರ ರಥಹೀನನಾಗಿಹೆನು ।
ಮರುಕದ ಮಾತಲ್ಲವೆನೆ ಸೈರಿಸಿದನು ॥ ೨ ॥

॥ ಭಾಮಿನಿ ॥

ಬಿಸಜನಾಭನು ಚಮ್ಮಟಿಗೆಯಲಿ ।
ಅಸಮಬಲನನು ತಿವಿದು ನುಡಿದನು ।
ಕಸುವು ಹಿಂಗೊಳಿಸಿದುದು ರಾಧೇಯನಿಗೆ ತೋಳ್ಗಳಲಿ ॥

ಎಸೆ ಮರುಳ ಗಾಂಡೀವಿಯಾ ಪ ।
ತ್ತೆಸಗಿದಾಗಲೆ ಹಗೆಯ ಕೊಲುವುದು ।
ವಸುಮತೀಶರ ನೀತಿಯೆನಲಾ ಶೌರಿಗಿಂತೆಂದ ॥ ೧ ॥

**॥ ಸೌರಾಷ್ಟ್ರ – ಅಷ್ಟತಾಳ ॥**

ಮನಸಿಜ ಪಿತ ನೀನು ಮನದ ಸಂಶಯ ನೀಗು । ಕರ್ಣನ್ಯಾರೈ । ಯೆನ್ನ
ಮನವಳುಕುತಲನುಕಂಪವುಕ್ಕುತಲಿದೆ । ಕರ್ಣನ್ಯಾರೈ ॥
ಧನುವಿಗೆ ಕೂರ್ಗಣೆ ಸಂಧಿಸಲಾರೆನು । ಕರ್ಣನ್ಯಾರೈ । ಯಾವ ।
ವನಿತೆ ಪೆತ್ತಿಹ ಶೂರ ಶಾರ್ದೂಲನೀತನು । ಕರ್ಣನ್ಯಾರೈ ॥
ಅಣ್ಣ ಧರ್ಮಜನಿಂದಲಧಿಕ ತೋರುತಲಿದೆ । ಕರ್ಣನ್ಯಾರೈ । ಯೀತ ।
ನೆನ್ನೊಡ ಹುಟ್ಟೊ ಸಂಬಂಧವೊ ಕಾಣೆನು । ಕರ್ಣನ್ಯಾರೈ ॥
ಮುನ್ನಿನ ದ್ವೇಷಾಗ್ನಿ ತಣಿದಾಯ್ತು ಭಾವಯ್ಯ । ಕರ್ಣನ್ಯಾರೈ । ಈತ ।
ಗಿನ್ನು ದಿವ್ಯಾಸ್ತ್ರವ ಸರ್ವಥಾ ತೊಡೆನಯ್ಯ । ಕರ್ಣನ್ಯಾರೈ ॥ ೨ ॥

**॥ ವಾರ್ಧಿಕ ॥**

ಎಂದಡೆಲೆ ಮರುಳೆ ಕೌಂತೇಯ ನಿನಗೇನೆಂಬೆ ।
ಮಂದಮತಿಸೂತಸುತನಿವ ನಿನ್ನ ಬಾಂಧವನೆ ।
ಹಂದೆ ಕುಲಗೆಡುಕ ಕೌರವನ ಬಾಯ್ದಂಬುಲಕೆ
ಕೈ ನೀಡಿದವ ಬಂಧುವೆ ॥
ಚಂದಿರಾನ್ವಯ ಸೊಡರನಂದಿಸಿರುವಧಮನಿವ ।
ಕಂದನಭಿಮನ್ಯುವಿನ ಚಾಪವಿಕ್ಕಡಿಗೈದು ।
ಕೊಂದುತವ ಬಸಿರಿಂಗೆ ಕೊಳ್ಳಿಯಿಕ್ಕಿದನೆನಲು
ಪಾರ್ಥ ತಾ ಖತಿಗೊಂಡನು ॥ ೧ ॥

**॥ ಕಲ್ಯಾಣಿ – ಝಂಪೆ ॥**

ಹಿಡಿ ಧನುವ ಸಾಕು ಮೇಲೇಳೀಗ ಸ್ಥೈರಣೆ ।
ಕೆಡಿಸಬೇಡೆನುತೆಚ್ಚನು ॥
ಅಡಿಗಡಿಗೆ ನೂರಂಬುಗಳನೇಕ ಕಾಲದಲಿ ।
ಘಡಯನುತ ಕರ್ಣ ಮೇಲೆದ್ದು ॥ ೧ ॥

ಭಳಿಭಳಿರೆ ಧುರನೀತಿಯನು ಮರೆತು ಚೋರತನ ।
ಕಲಿತೆ ನೀನೆಲ್ಲಿ ಪಾರ್ಥ ॥
ಛಲವ ನೋಡೆನುತ ಕಿಗ್ಗಟ್ಟಿನ ಕಠಾರಿಯನು ।
ಸೆಳೆದರೂ ಕೈಸಾಗದಾಯ್ತು ॥ ೨ ॥

॥ ಭಾಮಿನಿ ಅರ್ಧ ॥

ಪ್ರಾಣ ಪಾಂಡವರೆಂಬ ವಚನವ ।
ಜಾಣತನದಲಿ ಶೌರಿಯುಳುಹಿದ ।
ಕಾಣೆನಾಪ್ತರ ನನ್ನದಾತನಿಗೆನುತ ಮರುಗಿದನು ॥

**॥ ಸೌರಾಷ್ಟ್ರ – ತ್ರಿವುಡೆ ॥**

ನೋಡಿ ದಣಿಯನು ತನಗೆವುಚಿತವ ।
ಮಾಡಿ ದಣಿಯನು ಯೆನ್ನ ಮೇಳದೊ ।
ಛಾಡಿ ದಣಿಯನು ಶಿವಶಿವಾ । ಯೆನ್ನರಸನೆನಗೆ ॥ ೧ ॥

ಕುಲವಿಹೀನತೆ ಮಲಿನ ತೊಳೆದನು ।
ಸಲಹಿದನು ಪಿತನಂತೆ ತನ್ನವ ।
ರಳಿವ ಮರೆತನು ಎನ್ನೊಳಾ । ಕುರು ತಿಲಕನೆಂದು ॥ ೨ ॥

ವರ್ಣವೈಷಮ್ಯದಲಿ ಸತ್ತಿಹೆ ।
ಮುನ್ನವೇ ತಾನಹುದು ಯೆನ್ನಯ ।
ವರ್ಣವರುಹುತ ಕೊಂದನಾ ಸಂ । ಪನ್ನ ಹರಿಯು ॥ ೩ ॥

ಬಂದನಾ ಗೋವಿಂದ ಬ್ರಾಹ್ಮಣ ।
ನಂದವಾಂತುರೆ ಕರ್ಣ ಸನಿಹದಿ ।
ನಿಂದು ಬೇಡಿದ ಸಲಿಸಭೀಷ್ಟವ । ನೆಂದು ಬಳಿಕ ॥ ೪ ॥

ನೀಡಿ ದಣಿಯದ ಕೈಗಳಿವು ಧುರ ।
ರೂಢಿ ಮಿತಿಯಲಿ ಬೆಸಸಿ ನೀವದ ।
ನೀಡೆನೆಂಬೆನೆ ದೇವಯೆನಲಾ । ಮೋಡಿಗಾರ ॥ ೫ ॥

ಕರ್ಣ ತೂಗುತಲಿಹುದು ನೀಡು ಸು ।
ವರ್ಣಕುಂಡಲ ಧಾರೆಯೆರೆಯೆನೆ ।
ಕರ್ಣ ಜಲವರಸಲ್ಕೆ ಪೇಳ್ದ ಸು । ಪರ್ಣವಾಹನ ॥ ೬ ॥

॥ ಭಾಮಿನಿ ॥

ಮಾತೆ ಬಲ್ಲಳು ಮರಣ ಬಯಸಳು ।
ತಾತ ಬಲ್ಲನು ಕೇಳ, ಲಕ್ಷ್ಮೀ ।
ನಾಥ ಮಾಯಾ ವಿಪ್ರನೆಂದು ಪ್ರಸನ್ನ ಭಾವದಲಿ ॥
ಘಾತಿಸಿದ ಸರಳಿಂದಲುರ ಖ ।
ದ್ಯೋತನಂದನ ತೆಗೆದನುದಕವ ।
ಪ್ರೀತನಾಗೈ ಕೃಷ್ಣ ಕೃಷ್ಣಾರ್ಪಣವೆನುತಲಿತ್ತ ॥ ೧ ॥

-- ಮಂಗಲಂ --

* * *



## ಸಿದ್ಧಕಟ್ಟೆಯವರ ಪ್ರಸಂಗಗಳು

ಕನ್ನಡ :

ವಿಷಮ ಸಮರಂಗ

ವರ್ಣವೈಷಮ್ಯ

ಚಾಣಕ್ಯತಂತ್ರ

ಶ್ರೀರಾಮಸೇತು

ಶಶಿವಂಶವಲ್ಲರಿ

ಜ್ವಾಲಾಜಾಹ್ನವಿ

ಲೀಲಾಮಾನುಷವಿಗ್ರಹ

ಕನ್ಯಾತರಂಗ

ಚಕ್ರವರ್ತಿ ಶಿವಾಜಿ

ತುಳು :

ರತ್ನರಾಧಿಕೆ

ಮೀನ ಮಚ್ಚಿ

ಪಟ್ಟದ ದೈವ

ಗರುಡರೇಖೆ

ಬಾರ್ಕೂರು ಬಾರಗೆ

ಬೊಳ್ಳಿ ದಂಡಿಗೆ

ಗೆಂಡ ಸಂಪಿಗೆ

ಮಂಗಳಾದೇವಿಮಹಾತ್ಮ್ಯೆ

